ವಿಜಯಪುರ | ಸಂಪುಟ 04 | ಸಂಚಿಕೆ 209 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

**Udayarashmi** Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಅಕ್ಟೋಬರ್, 11, 2026

"ರಮೇಶ್ ಜಾರಕಿಹೊಳಿಗೆ ಸ್ಟಿಂಗ್ ಆಪರೇಷನ್ ಮಾಡಿದ್ದು ಯಾರು ಅವರನ್ನು ರಾಜಕೀಯವಾಗಿ ಮುಗಿಸಲು ಪ್ಲಾನ್ ಮಾಡಿದ್ಯಾರು? ರಾಜ್ಯದ ಮುಖ್ಯಮಂತ್ರಿಯಾದವರು ಇಂತಹ ಕೀಳು ಮಟ್ಟದ ರಾಜಕೀಯಕ್ಕೆ ಇಳಿಯಬಾರದಿತ್ತು. ಸ್ವತಃ ಸಚಿವರು ಮತ್ತು ಶಾಸಕರ ವಿರುದ್ಧವೇ ಸ್ಟಿಂಗ್ ಆಪರೇಷನ್ ಮಾಡಿಸುವ ಹಂತಕ್ಕೆ ಸರ್ಕಾರ ತಲುಪಿರುವುದು ಶೋಚನೀಯ"



■ ಚಲವಾದಿ ನಾರಾಯಣಸ್ವಾಮಿ
ವಿಧಾನ ಪರಿಷತ್ ಪ್ರತಿಪಕ್ಷ ನಾಯಕ

## ಮೂಲಸೌಕರ್ಯಗಳ ಕೊರತೆಯಿಂದ ಜನರು ಕಂಗಾಲು । ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರ ಆಕ್ರೋಶ

# ಬೇಸಿಗೆಗೂ ಮುನ್ನವೇ ಚಿಂಚೋಳಿಯಲ್ಲಿ ಕುಡಿವ ನೀರಿಗೆ ಹಾಹಾಕಾರ

■ ಉದಯರಶ್ಮಿ ದಿನಪತ್ರಿಕೆ



ಅಫ್ಜಲ್‌ಪುರ: ತಾಲೂಕಿನ ಚಿಂಚೋಳಿ ಗ್ರಾಮದಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ತೀವ್ರ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಗ್ರಾಮಸ್ಥರು ಒಂದು ಹನಿ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಜನರು ಕಂಗಾಲಾಗಿದ್ದು, ಸ್ಥಳೀಯ ಗ್ರಾಮ ಪಂಚಾಯತ್ ಆಡಳಿತ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಬೋರ್‌ವೆಲ್ ಸ್ಟಾರ್ಟರ್ ತೆರವು ನೀರಿನ ಅಭಾವ: ಗ್ರಾಮದಲ್ಲಿ ನೀರಿನ ಸಮಸ್ಯೆಗೆ ಪ್ರಮುಖ ಕಾರಣ ಪಂಚಾಯಿತಿಯ ಎಡವಟ್ಟು. ಗ್ರಾಮದ ಬೋರ್‌ವೆಲ್‌ಗೆ ಅಳವಡಿಸಲಾಗಿದ್ದ ಸ್ಟಾರ್ಟರ್ ಅನ್ನು ಪಂಚಾಯಿತಿ ಸಿಬ್ಬಂದಿ ಕಿತ್ತು ಬೇರೆಡೆಗೆ ಸ್ಥಳಾಂತರಿಸಿದ್ದಾರೆ. ಪರಿಣಾಮವಾಗಿ, ನಿಯಮಿತವಾಗಿ ಸರಬರಾಜಾಗಬೇಕಿದ್ದ ನೀರು ಸಂಪೂರ್ಣ ಸ್ಥಗಿತಗೊಂಡಿದ್ದು, ಜನಸಾಮಾನ್ಯರು ನಿತ್ಯದ ಅಗತ್ಯಗಳಿಗಾಗಿ ನೀರಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ.

ಕತ್ತಲಲ್ಲಿ ಗ್ರಾಮ: ಕಳಪೆ ಬೀದಿ ದೀಪಗಳು: ನೀರಿನ ಸಮಸ್ಯೆಯಷ್ಟೇ ಅಲ್ಲದೆ, ಗ್ರಾಮದಲ್ಲಿ ಬೀದಿ ದೀಪಗಳ ವ್ಯವಸ್ಥೆಯೂ ಸಂಪೂರ್ಣ ಹದಗೆಟ್ಟಿದೆ. ಪಂಚಾಯಿತಿಯಿಂದ ಅಳವಡಿಸಲಾದ ಬಲ್ಬ್‌ಗಳು ಕಳಪೆ ಗುಣಮಟ್ಟದ್ದಾಗಿದ್ದು, ಅಳವಡಿಸಿದ ಮರುದಿನವೇ ಕೆಟ್ಟು ನಿಂತಿವೆ. ಇದರಿಂದಾಗಿ ರಾತ್ರಿಯ ವೇಳೆ ಗ್ರಾಮದಲ್ಲಿ ಕತ್ತಲು ಆವರಿಸಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ.

ಸಮಸ್ಯೆ ಕುರಿತು ಅಧಿಕಾರಿಗಳಿಗೆ ಪದೇ ಪದೇ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ ಎಂಬುದು ಸ್ಥಳೀಯರ ಆರೋಪ. ಇನ್ನಾದರೂ ತಾಲೂಕು ಆಡಳಿತ ಹಾಗೂ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಮಧ್ಯಪ್ರವೇಶಿಸಿ ತಕ್ಷಣ ಕುಡಿಯುವ ನೀರು ಹಾಗೂ ಬೀದಿ ದೀಪದ ವ್ಯವಸ್ಥೆ ಕಲ್ಪಿಸಬೇಕು, ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ.

## ಗ್ರಾಮ ಪಂಚಾಯತಿಗೆ ಚಿಮ್ಮಡ ಗ್ರಾಮದ 6ನೇ ವಾರ್ಡಿನ ಗ್ರಾಮಸ್ಥರ ಪತ್ರ

# ಬಯಲು ಬಹಿರ್ದೆಸೆ ತಡೆಯದಿದ್ದರೆ ರಸ್ತೆಯೇ ಬಂದ್!

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಇಲಾಹಿ ಇ, ಜಮಖಂಡಿ



ಚಿಮ್ಮಡ: ಗ್ರಾಮದ 6ನೇ ವಾರ್ಡಿನ ಹಲವಾರುಜನಗ್ರಾಮಸ್ಥರುರಸ್ತೆಬದಿಯಲ್ಲಿಯೇ ಬಹಿರ್ದೆಸೆಗೆ ಹೋಗುತ್ತಿರುವುದರಿಂದ ಆ ಭಾಗದಲ್ಲಿ ವಾಸಿಸುವ ಕುಟುಂಬಸ್ಥರಿಗೆ ಪರಿಸರ ಮಾಲಿನ್ಯದಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಭೀತಿಯುಂಟಾಗಿದ್ದು ಕೂಡಲೆ ಈ ಅನಿಷ್ಠ ವ್ಯವಸ್ಥೆ ನಿಲ್ಲಿಸುವ ಕ್ರಮ ಕೈಗೊಳ್ಳದಿದ್ದಲ್ಲಿ ಈ ರಸ್ತೆಯ ಸಂಚಾರವನ್ನೆ ಬಂದ್ ಮಾಡುವ ಮೂಲಕ ಪ್ರತಿಭಟಿಸಲಾಗುವುದೆಂದು ಈ ಭಾಗದ ನಾಗರಿಕರು ಗ್ರಾಮ ಪಂಚಾಯತಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಸುಮಾರು ಇಪ್ಪತ್ತು ಸಾವಿರ ಜನಸಂಖ್ಯೆ ಹೊಂದಿರುವ ಚಿಮ್ಮಡ ಗ್ರಾಮದ ಪ್ರಮುಖ ಸಂಪರ್ಕ ರಸ್ತೆಗಳಲ್ಲಿಯೇ ಜನರು ಬಯಲು ಬಹಿರ್ದೆಸೆಗೆ ಹೋಗುತ್ತಿರುವುದರಿಂದ ಈ ರಸ್ತೆಗಳಲ್ಲಿ ಸಂಚರಿಸುವುದೇ ದುಸ್ತರವಾಗಿದ್ದು ಈ ಮಾರ್ಗದಲ್ಲಿ ಸಂಚರಿಸುವ ಶಾಲಾ ಮಕ್ಕಳು, ಮಹಿಳೆಯರು ಹಾಗೂ ವೃದ್ದರು ಮೂಗು ಮುಚ್ಚಿಕೊಂಡೇ ಗ್ರಾಮ ಪ್ರವೇಶ ಮಾಡುವ ಸ್ಥಿತಿ ನಿರ್ಮಾಣಗೊಂಡಿದೆ ಮನೆಯಲ್ಲಿ ಶೌಚಾಲಯ ನಿರ್ಮಿಸಿ ಕೊಂಡಿದ್ದರೂ ಬಯಲು ಶೌಚಕ್ಕೆ ಬರುವ ಗ್ರಾಮಸ್ಥರ ಸಂಖ್ಯೆಯೇ ಬಹಳಷ್ಟಿದೆ. ಇದಕ್ಕೆ ಕೂಡಲೆ ಕಡಿವಾಣ ಹಾಕದಿದ್ದಲ್ಲಿ ಬಳಗಾರ ಕ್ರಾಸ್‌ನಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯನ್ನು ಬಂದ ಮಾಡುವುದಾಗಿ ಅನೀಲ ಬಳಗಾರ ನೇತ್ರತ್ವದಲ್ಲಿ ಇಪ್ಪತ್ತಕ್ಕೂ ಹೆಚ್ಚು ಜನ ಗ್ರಾಮಸ್ಥರು ಮನವಿ ಸಲ್ಲಿಸಿ ಆಗ್ರಹಿಸಿದ್ದಾರೆ.

ಈ ಕುರಿತು ಗ್ರಾಂ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರರನ್ನು ಸಂಪರ್ಕಿಸಿದರೆ ಬಯಲುಶೌಚ ತಡೆಗಟ್ಟಲು ಜಲ ನಿರ್ಮಲ ಯೋಜನೆ, ಸ್ವಚ್ಚ ಭಾರತ್ ಮಿಷನ್, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಅನುದಾನದಲ್ಲಿ ಈಗಾಗಲೇ 250 ವೈಯಕ್ತಿಕ ಒಡೆತನದ ಗುಂಪು ಶೌಚಾಯಗಳು, 30 ಸಾರ್ವಜನಿಕ ಶೌಚಾಲಯಗಳು, 4 ಮಹಿಳಾ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು 12 ಸಮುದಾಯ ಶೌಚಾಲಯಗಳ ನಿರ್ಮಾಣ ಅಲ್ಲದೇ ವೈಯಕ್ತಿಕವಾಗಿ ಮನೆಯಲ್ಲಿಯೇ ಶೌಚಾಲಯ ನಿರ್ಮಿಸಿಕೊಳ್ಳುವ ಬಡ ಕುಟುಂಬಕ್ಕೆ ಪರಿಶಿಷ್ಟ ಜಾತಿ/ಪಂಗಡದವ-ರಿಗೆ 20 ಸಾವಿರ ಇತರ ಕುಟುಂಬಗಳಿಗೆ 12 ಸಾವಿರದಂತೆ ಸರಕಾರದಿಂದ ಸಹಾಯಧನ ನೀಡಲಾಗುತ್ತಿದೆ. ಅಲ್ಲದೇ ಕಳೆದ ವರ್ಷ ಕಾವಲು ಸಮೀತಿ ರಚಿಸಿ ಸುಮಾರು ಒಂದು ತಿಂಗಳ ಕಾಲ ಬಯಲು ಬಹಿರ್ದೆಸೆಗೆ ಬರುವ ನಾಗರಿಕರನ್ನು ಶೌಚಾಲಯ ಬಳಸುವಂತೆ ಮನವೊಲಿಸಿ ಬಯಲು ಬಹಿರ್ದೆಸೆ ತಡೆಯಲಾಗಿತ್ತು. ಈಗ ಕ್ರಮೇಣ ಮತ್ತೆ ಈ ಪಿಡುಗು ಹೆಚ್ಚುತ್ತಿದೆಯಲ್ಲದೇ ವಿದ್ಯಾವಂತರೇ ಶೌಚಕ್ಕಾಗಿ ರಸ್ತೆಪಕ್ಕದ ಸ್ಥಳ ಆಶ್ರಯಿಸುತ್ತಿರುವುದು ವಿಪರ್ಯಾಸ ಎನ್ನುತ್ತಾರೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ.

> "ಬಯಲು ಬಹಿರ್ದಸೆ ತಡೆಯಲು ಕೇಂದ್ರ, ರಾಜ್ಯ ಸರಕಾರಗಳು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದರೂ ತಾಲೂಕಿನ ಹಲವಾರು ಗ್ರಾಮಗಳಲ್ಲಿ ಇನ್ನೂ ಈ ಪಿಡುಗು ಜೀವಂತವಾಗಿದ್ದು, ಸರಕಾರವೇ ಕಠಿಣ ನಿಲುವು ತಳೆಯದ ಹೊರತು ಈ ವ್ಯವಸ್ಥೆಗೆ ಕೊನೆಗಾಲವಿಲ್ಲ."
>
> ■ ಸಿದ್ದು ಪಟ್ಟಿಹಾಳ
> ಆಡಳಿತ ಅಧಿಕಾರಿಗಳು ಗ್ರಾ.ಪಂ. ಚಿಮ್ಮಡ.

## ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ ಸಮರ್ಥಿಸಿಕೊಂಡ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ

# ಸರ್ಕಾರ ಅಸ್ಥಿರಕ್ಕೆ ಐಟಿ–ಇಡಿಯಿಂದ ಸ್ಟಿಂಗ್ ಆಪರೇಷನ್!



ಬೆಂಗಳೂರು: ರಾಜ್ಯ ಸರ್ಕಾರವನ್ನು ಹೇಗಾದರೂ ಮಾಡಿ ಪತನಗೊಳಿಸಬೇಕು ಎಂಬ ಪ್ರಯತ್ನ ಕೇಂದ್ರ ಸರ್ಕಾರದಿಂದ ನಡೆಯುತ್ತಿದೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಗಂಭೀರ ಆರೋಪ ಮಾಡಿದ್ದು, ಈ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ಬಂದಿರುವ ಮಾಹಿತಿ ಪ್ರಕಾರ, ಕೇಂದ್ರ ಸರ್ಕಾರ ಹತಾಶೆಗೊಂಡಿದ್ದು, ರಾಜ್ಯಸರ್ಕಾರವನ್ನು ಪತನಗೊಳಿಸಬೇಕು ಎಂಬ ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿದರು.

ಸರ್ಕಾರಕ್ಕೆ ಲಭ್ಯವಾದ ಮಾಹಿತಿಯ ಆಧಾರದ ಮೇಲೆ ಸಚಿವರಿಗೆ ಎಚ್ಚರಿಕೆಯಿಂದ ಇರುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ, ಈ ವಿಚಾರದಲ್ಲಿ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯ ಸೇರಿದಂತೆ ಕೇಂದ್ರದ ತನಿಖಾ ಸಂಸ್ಥೆಗಳ ಪಾತ್ರವೇನು ಎಂದು ಪ್ರಶ್ನಿಸಿದ್ದಾರೆ.

ಸಚಿವರಿಗೆ ಎಚ್ಚರಿಕೆಯಿಂದ ಇರುವಂತೆ ಮುಖ್ಯಮಂತ್ರಿ ಸೂಚಿಸಿರುವುದರ ಹಿಂದೆ ಸರ್ಕಾರಕ್ಕೆ ಬಂದಿರುವ ಮಾಹಿತಿ ಇದೆ. ಇಂತಹ ಪ್ರಯತ್ನಗಳ ಬಗ್ಗೆ ಸಚಿವರು ಜಾಗರೂಕರಾಗಿರಬೇಕು ಎಂಬುದು ಮುಖ್ಯಮಂತ್ರಿಗಳ ಸೂಚನೆಯಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಇದೇ ವೇಳೆ, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಾಡಿರುವ ಆರೋಪಗಳಿಗೂ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಕುಮಾರಸ್ವಾಮಿ ತಮ್ಮ ಆರೋಪಗಳಿಗೆ ಸೂಕ್ತ ಪುರಾವೆಗಳನ್ನು ನೀಡಬೇಕು. ನೀವು ಮಾಜಿ ಮುಖ್ಯಮಂತ್ರಿ ಮತ್ತು ಕೇಂದ್ರ ಸಚಿವರು. ನಿಮ್ಮ ಹುದ್ದೆಯ ಘನತೆಯನ್ನು ಕಾಪಾಡಿಕೊಳ್ಳಿ ಎಂದು ಹೇಳಿದರು.

### ದಾಖಲೆ ಮುಚ್ಚಿಡುವುದು ಗಂಭೀರ ಅಪರಾಧ :ಅಶೋಕ



ಬೆಂಗಳೂರು: ರಾಜ್ಯದಲ್ಲಿ 'ಸ್ಟಿಂಗ್ ಆಪರೇಷನ್' ಮತ್ತು 'ಹನಿಟ್ರ್ಯಾಪ್' ಪ್ರಯತ್ನಗಳಿಗೆ ಸಂಬಂಧಿಸಿದ ರಾಜಕೀಯ ವಿವಾದ ತೀವ್ರಗೊಂಡಿದೆ. ಹನಿಟ್ರ್ಯಾಪ್ ಘಟನೆಗಳಿಗೆ ಸಂಬಂಧಿಸಿವೆ ಎನ್ನಲಾದ ಮೂರು ವಿಡಿಯೋಗಳು ತಮ್ಮ ಬಳಿಯೂ ಇವೆ. ಈ ವಿಷಯವನ್ನು ಲಘುವಾಗಿ ಪರಿಗಣಿಸಬಾರದು. ಆರೋಪಿತ ವಿಡಿಯೋಗಳು ಈ ವಿವಾದದ ಕುರಿತು ಹೆಚ್ಚಿನ ಮಾಹಿತಿ ನೀಡಬಲ್ಲವು ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದ ಅಡಿಯಲ್ಲಿ ನೀವು (ಡಿಕೆ ಶಿವಕುಮಾರ್) ಪ್ರಮಾಣವಚನ ಸ್ವೀಕರಿಸಿದ್ದೀರಿ. ನಿಮ್ಮ ಗಮನಕ್ಕೆ ಬಂದ ಮೇಲೆ ಯಾಕೆ ಕ್ರಮ ತೆಗೆದುಕೊಂಡಿಲ್ಲ?. ದಾಖಲೆ ಸಿಕ್ಕಿದ್ದರೂ ಅದನ್ನು ಮುಚ್ಚಿಡುವುದು ಗಂಭೀರ ಅಪರಾಧ. ನನಗೆ ಕೂಡಾ ಕೆಲವು ಈ ಬಗೆಗಿನ ವಿಡಿಯೋಗಳನ್ನು ಕಳುಹಿಸಿದ್ದಾರೆ. ವಿಡಿಯೋಗಳು ಈಗ ಎಲ್ಲರ ಬಳಿಯಲ್ಲೂ ಓಡಾಡುತ್ತಿವೆ. ಇದರ ಬಗ್ಗೆ ಸಿಎಂ ಯಾಕೆ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ? ಎಂದು ಪ್ರಶ್ನಿಸಿದರು.

# ವೈಭವದ ದಸರಾ ಆಚರಣೆಗೆ ಸಕಲ ಸಿದ್ಧತೆ :ಡಾ.ದೇವಾನಂದ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮೈಸೂರು ದಸರಾ ವೈಭವದ ಮಾದರಿಯಲ್ಲಿಯೇ ತಾಂಬಾದಲ್ಲಿ ನಾಡದೇವಿ ನವರಾತ್ರಿ ಉತ್ಸವ ನಡೆಯುವುದುಂಟು. ಈ ಬಾರಿಯೂ ದಿ.11 ರಿಂದ ಹತ್ತು ದಿನಗಳ ಕಾಲ ವೈಭವದ ದಸರಾ ಆಚರಣೆಗೆ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಕುರಿತು ವಿವರಣೆ ನೀಡಿದ ನಾಗಠಾಣ ಮಾಜಿ ಶಾಸಕ ಡಾ.ದೇವಾನಂದ ಚವ್ಹಾಣ ಅವರು, ತಾಂಬಾದಲ್ಲಿ ಸಮಾಜ ಸೇವಕ ದಿ.ಫೂಲಸಿಂಗ್ ಚವ್ಹಾಣ ಹಾಗೂ ಸಮಾನ ಮನಸ್ಕರು ಸೇರಿ 1972 ರಿಂದ ದಸರಾ ಉತ್ಸವ ಆಚರಣೆಗೆ ಮುಂದಾದರು, ಕಳೆದ 55 ವರ್ಷಗಳಿಂದಲೂ ನಿರಂತರವಾಗಿ ಮೈಸೂರು ದಸರಾ ಮಾದರಿಯಲ್ಲಿಯೇ ದಸರಾ ಉತ್ಸವವನ್ನು ಆಯೋಜಿಸುತ್ತಾ ಬರಲಾಗಿದೆ ಎಂದರು.

ದಿನಾಂಕ 11 ರಂದು ಉತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಗುತ್ತಿದ್ದು, ಬಂಥನಾಳದ ಶ್ರೀ ಸಂಗನಬಸವ ದೇವರ ಸಾನಿಧ್ಯದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಸಿಂದಗಿ ಶಾಸಕ ಅಶೋಕ ಮನಗೂಳಿ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಹಗರಿ ಬೊಮ್ಮನಳ್ಳಿ ಶಾಸಕ ಎಸ್. ಭೀಮಾನಾಯಕ ಹಾಗೂ ಸಮಾಜ ಸೇವಕ ಡಾ.ಪ್ರಭುಗೌಡ ಪಾಟೀಲ ಕುಂಭಮೇಳ ಹಾಗೂ ವೈಭವದ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಜಗದಂಬಾ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಿ.ಬಿ. ಅಂಗಡಿ ಅಧ್ಯಕ್ಷತೆ ವಹಿಸುವರು. ಅನ್ನದಾಸೋಹ ಕಾರ್ಯಕ್ಕೆ ಮಾಜಿ ಶಾಸಕ ರಮೇಶ ಭೂಸನೂರ ಚಾಲನೆ ನೀಡಲಿದ್ದಾರೆ. ಶ್ರೀ ಜಗನು ಮಹಾರಾಜರು, ಶ್ರೀ ಸೋಮಲಿಂಗ ಮಹಾರಾಜರು, ಶ್ರೀ ಧನಸಿಂಗ್ ಮಹಾರಾಜರು ಸಾನಿಧ್ಯ ವಹಿಸಲಿದ್ದಾರೆ, ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ, ವಿಶ್ರಾಂತ ಡಿವೈಎಸ್‌ಪಿ ಆರ್.ಕೆ. ನಾಯಕ, ಸಿಪಿಐ ಸುನೀಲ ಪಾಟೀಲ, ಬಿಜೆಪಿ ಮುಖಂಡ ಮಹೇಂದ್ರಕುಮಾರ ನಾಯಕ, ಜಿ.ಪಂ. ಮಾಜಿ ಸದಸ್ಯ ಪಂಚಪ್ಪ ಕಲಬುರ್ಗಿ ಮೊದಲಾದವರು ಆಗಮಿಸಲಿದ್ದಾರೆ ಎಂದು ಚವ್ಹಾಣ ತಿಳಿಸಿದರು.

ಮುಂಬೈನ ಮಹಾಕಾಲಿ ಇವೆಂಟ್ಸ್ ಸಹಯೋಗದಲ್ಲಿ ಅಘೋರಿ ಕಾರ್ಯಕ್ರಮ ಮೆರವಣಿಗೆಯ ಕೇಂದ್ರ ಬಿಂದುವಾಗಲಿದೆ, ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರವಣಿಗೆಗೆ ಕಳೆ ಕಟ್ಟಲಿವೆ ಎಂದರು.

ದಿ.12 ರಂದು ರಾತ್ರಿ 8 ಕ್ಕೆ ಮುಕ್ತ ಕೋಲಾಟ, ದಿ.13 ರಂದು ಬೆಳಿಗ್ಗೆ 11 ಕ್ಕೆ ಖೋಖೋ ಪಂದ್ಯಾವಳಿ, ಅದೇ ದಿನ ರಾತ್ರಿ 8 ಕ್ಕೆ ರಸಮಂಜರಿ, ದಿ.14 ರಂದು ಮ್ಯೂಸಿಕಲ್ ಚೇರ್, ಹಿಟ್ಟಿನಲ್ಲಿ ನಾಣ್ಯ ತೆಗೆಯುವ ವಿಭಿನ್ನ ಸ್ಪರ್ಧೆಗಳು ನಡೆಯಲಿವೆ ಎಂದು ಡಾ.ಚವ್ಹಾಣ ವಿವರಿಸಿದರು.

ದಿನಾಂಕ 15 ರಂದು ಸಮಸ್ತ ನಾಡಿನ ಜನತೆಯ ಒಳಿತಿಗಾಗಿ ನವಚಂಡಿ ಹೋಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.ಉತ್ಸವ ಸಮಿತಿ ಅಧ್ಯಕ್ಷ ಅಭಿನವ ಚವ್ಹಾಣ, ಪ್ರೀತಮ್ ಚವ್ಹಾಣ, ದೊಡಮನಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ದೇವರಹಿಪ್ಪರಗಿ ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮುಖ್ಯಾಧಿಕಾರಿ ಅಪ್ರೋಜ್ ಅಹ್ಮದ್ ಪಟೇಲ ಮನವಿ

# ಪಟ್ಟಣದ ಅಭಿವೃದ್ಧಿಗೆ ಪೂರಕ ಯೋಜನೆ ಸಿದ್ಧಪಡಿಸಲು ಸಹಕಾರ ನೀಡಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಪಟ್ಟಣದ ಸಮಗ್ರ ಅಭಿವೃದ್ಧಿಗೆ ಕ್ರಿಯಾ ಯೋಜನೆಯ ಮೂಲಕ ಎಲ್ಲರೂ ಸಹಕಾರ ನೀಡಬೇಕು ಎಂದು ಮುಖ್ಯಾಧಿಕಾರಿ ಅಪ್ರೋಜ್ ಅಹ್ಮದ್ ಪಟೇಲ ಹೇಳಿದರು.

ಪಟ್ಟಣ ಪಂಚಾಯಿತಿಯಲ್ಲಿ ಶುಕ್ರವಾರ ಜರುಗಿದ 16ನೇ ಹಣಕಾಸು ಯೋಜನೆಯ ಕ್ರಿಯಾ ಯೋಜನೆ ತಯಾರಿ ಹಾಗೂ ಶ್ರೀರಾವುತರಾಯ ಮಲ್ಲಯ್ಯ ಜಾತ್ರಾ ಮಹೋತ್ಸವ ಅಂಗವಾಗಿ ಕೈಗೊಳ್ಳಬೇಕಾದ ಕಾರ್ಯಗಳ ಕುರಿತಾದ ಸಾಮಾನ್ಯಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರತಿ ವರ್ಷ ಜಾತ್ರೆಯ ಅಂಗವಾಗಿ ಪಂಚಾಯಿತಿಯಿಂದ ಪ್ರಮುಖ ಬೀದಿಗಳ ಸ್ವಚ್ಛತೆ, ಕ್ರಿಮಿನಾಶಕ ಸಿಂಪಡಣೆ, ವಿದ್ಯುತ್ ಬಲ್ಬಗಳ ಜೋಡಿಸುವಿಕೆ ಸೇರಿದಂತೆ ಅಗತ್ಯ ಕಾರ್ಯಗಳನ್ನು ಮಾಡಲಾಗುತ್ತಿದೆ. ಇವುಗಳ ಜೊತೆಗೆ ಇನ್ನಾವುದೇ ಕಾರ್ಯದ ಅಗತ್ಯತೆ ಕುರಿತು ಸದಸ್ಯರು, ಸಮಿತಿ ಸದಸ್ಯರು ಮಾಹಿತಿ ನೀಡಿದಲ್ಲಿ ಅದನ್ನು ಸಹ ಮಾಡಲಾಗುವುದು . ಜೊತೆಗೆ ಪಟ್ಟಣದ ಅಭಿವೃದ್ಧಿಗೆ ಪೂರಕವಾದ ಯೋಜನೆ ಸಿದ್ಧಪಡಿಸಲು ಎಲ್ಲರೂ ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಸಭೆಯಲ್ಲಿ ಜಾತ್ರೆ ಅಚ್ಚುಕಟ್ಟಾಗಿ ಜರುಗಲು ಕೈಗೊಳ್ಳಬೇಕಾದ ಸ್ವಚ್ಛತೆ ಸೇ-ರಿದಂತೆ ಅಗತ್ಯ ಕ್ರಮಗಳ ಕುರಿತು ಸದಸ್ಯರು ಸಲಹೆಗಳನ್ನು ನೀಡಿದರು.

ಪಂಚಾಯಿತಿ ಅಧ್ಯಕ್ಷೆ ಜಯಶ್ರೀ ದೇವಣಗಾಂವ, ಉಪಾಧ್ಯಕ್ಷ ರಮೇಶ ಮಸಬಿನಾಳ, ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕತ್ತಿ), ಶಾಂತಯ್ಯ ಜಡಿಮಠ, ಕಾಸು ಜಮಾದಾರ, ಡಾ.ಗುರುರಾಜ್ ಗಡೇದ, ಉಮೇಶ ರೂಗಿ, ಕಾಶೀನಾಥ ಬಜಂತ್ರಿ, ಸಿಂಧೂರ ಡಾಲೇರ, ಸುಮಂಗಲಾ ಸೇಬೆನವರ, ಶೋಭಾ ಮಲ್ಲಾರಿ, ಸಲೀಮಾ ಮಣೂರ, ರತ್ನವ್ವಾ ದೇವೂರ ನಾಮ ನಿರ್ದೇಶಿತ ಸದಸ್ಯರಾದ ರಾಜು ಮೆಟಗಾರ, ಸುನೀಲ ಕನಮಡಿ, ಜೆಇ ಮಹೇಂದ್ರಕುಮಾರ ಬಡಿಗೇರ, ಸಿಬ್ಬಂದಿ ಸೋಮು ಭೋವಿ, ಬಂದಗೀಸಾಬ್ ಮಂಡೆ ಇದ್ದರು.

# ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿಗೆ ಆಗ್ರಹಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿಜಯಪುರ ಜಿಲ್ಲಾ 371(ಜೆ) ಹೋರಾಟ ಸಮಿತಿ ಮುಖಂಡರು ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿಗೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಅವರಿಗೆ ಮನವಿ ಸಲ್ಲಿಸಿದರು.

371(ಜೆ) ಮೀಸಲಾತಿ ಜಾರಿ ಮಾಡುವಾಗ ವಿಜಯಪುರ ಜಿಲ್ಲೆಯನ್ನು ಕೈ ಬಿಟ್ಟಿದ್ದರಿಂದ ಜಿಲ್ಲೆಯ ಜನರಿಗೆ ದೊಡ್ಡ ಅನ್ಯಾಯವಾಗಿದೆ. ವಿಜಯಪುರ ಜಿಲ್ಲೆಗೆ ಮೀಸಲಾತಿ ಕಲ್ಪಿಸಲು ಮುಖ್ಯಮಂತ್ರಿಗಳ ಗಮನಕ್ಕೆ ತಂದು ರಾಜ್ಯ ಸರಕಾರದಿಂದ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿಕೊಡಬೇಕು ಎಂದು ಹೋರಾಟಗಾರರು ಮನವಿ ಮಾಡಿದರು. ವಿಜಯಪುರ ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಯುವಕರಿಗೆ ನೇಮಕಾತಿಯಲ್ಲಿ ಮೀಸಲಾತಿ, ಕಲ್ಯಾಣ ಕರ್ನಾಟಕ ಭಾಗಕ್ಕೆ ಸಿಗುವ ವಿಶೇಷ ಅನುದಾನ ಸೌಲಭ್ಯ ಸೇ-ರಿದಂತೆ ಜಿಲ್ಲೆಯ 25 ಲಕ್ಷ ಜನರ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಸಂವಿಧಾನದ 371(ಜೆ) ಗೆ ತಿದ್ದುಪಡಿ ಮಾಡಿ ವಿಜಯಪುರ ಜಿಲ್ಲೆಯನ್ನು ಮೀಸಲಾತಿಯಡಿ ಸೇರಿಸಿ ಜಿಲ್ಲೆಯ ಸಮಸ್ತ ಜನರಿಗೆ ನ್ಯಾಯ ಒದಗಿಸಬೇಕೆಂದು ಹೋರಾಟಗಾರರು ಇದೆ ಸಂದರ್ಭದಲ್ಲಿ ಆಗ್ರಹಿಸಿದರು

ಮನವಿ ಸ್ವೀಕರಿಸಿದ ಲೋಣಿ ಅವರು ಹೋರಾಟ ಸಮಿತಿ ಬೇಡಿಕೆಗೆ ಸಕಾರಾತ್ಮಕವಾಗಿಸ್ಪಂದಿಸಿಹೋರಾಟಸಮಿತಿ ಹಾಗೂ ಜಿಲ್ಲೆಯ ಜನರ ನ್ಯಾಯಯುತ ಬೇಡಿಕೆ ಕುರಿತು ಮುಖ್ಯಮಂತ್ರಿ ಡಿ ಕೆ ಶಿವಕುಮಾರ, ಉಪಮುಖ್ಯಮಂತ್ರಿ ಡಾ ಜಿ ಪರಮೇಶ್ವರ ಜಿಲ್ಲಾ ಉಸ್ತುವಾರಿ ಸಚಿವ ಡಾ ಎಂಬಿ ಪಾಟೀಲ ಹಾಗೂ ಜಿಲ್ಲೆಯ ಎಲ್ಲ ಶಾಸಕರ ಗಮನಕ್ಕೆ ತಂದು ಜಿಲ್ಲೆಗೆ 371(ಜೆ) ಮೀಸಲಾತಿ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ಈರಣ್ಣ ಪಟ್ಟಣಶೆಟ್ಟಿ,ವಿ-ಜಯಪುರ ಜಿಲ್ಲಾ 371(ಜೆ ) ಹೋರಾಟ ಸಮಿತಿಯ ಮುಖಂಡರಾದ ವಿನೋದ ಖೇಡ, ಲಾಯಪ್ಪ ಇಂಗಳೆ, ಅನಿಲ ಇಕ್ಕಡೆ, ನ್ಯಾಯವಾದಿ ಎನ್ ಸುರೇಶಕುಮಾರ ಮಹಾದೇವಪ್ಪ ತೇಲಿ, ಸಾಗರ ಸಾವಳಗಿ ಅರುಣಕುಮಾರ ತೇರದಾಳ, ಹರೀಶ ಶಿರೂರು ಉಪಸ್ಥಿತರಿದ್ದರು.

## ಹಿರಿಯ ನಾಗರಿಕರಿಗೆ ಉಚಿತ ಡಿಮೆನ್ಷಿಯಾ ತಪಾಸಣೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹಿರಿಯ ನಾಗರಿಕರಲ್ಲಿ ಮರೆವು ರೋಗದ (ಡಿಮೆನ್ಷಿಯಾ) ಕುರಿತು ಜಾಗೃತಿ ಮೂಡಿಸುವುದು ಹಾಗೂ ರೋಗದ ಆರಂಭಿಕ ಲಕ್ಷಣಗಳನ್ನು ಗುರುತಿಸಿ ಸೂಕ್ತ ಆರೋಗ್ಯ ಸೇವೆ ಪಡೆಯಲು ನೆರವಾಗುವ ಉದ್ದೇಶದಿಂದ ವಿಜಯಪುರ ಮತ್ತು ಇಂಡಿ ಉಪವಿಭಾಗಗಳಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರಗಳನ್ನು ಆಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಅಟಲ್ ವಯೋ ಅಭ್ಯುದಯ ಯೋಜನೆಯಡಿ ಜಾರಿಗೊಳಿಸಲಾಗಿರುವ ಹಿರಿಯ ನಾಗರಿಕರ ರಾಜ್ಯ ಕ್ರಿಯಾ ಯೋಜನೆಯ 2026-27ನೇ ಸಾಲಿನ ಕಾರ್ಯಕ್ರಮದ ಅಂಗವಾಗಿ ಈ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಯೋಜನೆಯ ಮಾರ್ಗಸೂಚಿಯಂತೆ, ರಾಜ್ಯದ ಎಲ್ಲ ಜಿಲ್ಲೆಗಳ ಪ್ರತಿ ಕಂದಾಯ ಉಪವಿಭಾಗ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರಿಗಾಗಿ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವಿಜಯಪುರ ಉಪವಿಭಾಗ ಮಟ್ಟದ ಶಿಬಿರವು ಅಕ್ಟೋಬರ್ 13ರಂದು ವಿಜಯಪುರದ ಬಿ.ಎಲ್.ಡಿ.ಇ ಸಂಸ್ಥೆಯ ಬಿ.ಎಂ. ಪಾಟೀಲ್ ವೈದ್ಯಕೀಯ ಮಹಾವಿದ್ಯಾಲಯದ ನೆಲಮಹಡಿಯಲ್ಲಿರುವ ಹಿರಿಯ ನಾಗರಿಕರ ಆರೋಗ್ಯ ಕೇಂದ್ರದ ಕೊಠಡಿ ಸಂಖ್ಯೆ 08ರಲ್ಲಿ ನಡೆಯಲಿದೆ. ಇಂಡಿ ಉಪವಿಭಾಗ ಮಟ್ಟದ ಶಿಬಿರವು ಅಕ್ಟೋಬರ್ 15ರಂದು ಇಂಡಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಭಾಭವನದಲ್ಲಿ ಜರುಗಲಿದೆ. ಜಿಲ್ಲೆಯ ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ನಿಗದಿತ ದಿನಾಂಕಗಳಂದು ನಡೆಯುವ ಉಚಿತ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರಗಳ ಸದುಪಯೋಗ ಪಡೆದುಕೊಳ್ಳುವಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಸಕ ಯತ್ನಾಳರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಅ.12ಕ್ಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮತದಾರರ ಪಟ್ಟಿ ಪರಿಷ್ಕರಣೆ (ಖಖಖ) ಯಲ್ಲಿ ಆದ ಲೋಪದೋಷಗಳ ವಿರುದ್ಧ, ಕೇಂದ್ರ ಚುನಾವಣಾ ಆಯೋಗದ ಆಯುಕ್ತರಾದ ಜ್ಯಾನೇಶ್ವರಕುಮಾರ್ ಅವರ ಬಗ್ಗೆ ಆಧಾರ ರಹಿತವಾಗಿ ಆರೋಪಿಸಿ ತೇಜೋವಧೆ ಮಾಡುತ್ತಿರುವ ಕಾಂಗ್ರೆಸ್ ವಿರುದ್ಧ ಹಾಗೂ ಬರಗಾಲ ದಿಂದ ಸಂಕಷ್ಟದಲ್ಲಿರುವ ಅನ್ನದಾತರಿಗೆ ಹೆಚ್ಚಿನ ಬರ ಪರಿಹಾರ ನೀಡುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಅಕ್ಟೋಬರ್ 12 ರಂದು ದೇಶ ಭಕ್ತ ಜಾಗೃತ ಮತದಾರರ ವೇದಿಕೆ ವತಿಯಿಂದ ವಿಜಯಪುರ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11ಕ್ಕೆ ಸಿದ್ಧೇಶ್ವರ ದೇವಸ್ಥಾನ ಆವರಣ ದಿಂದ ಆರಂಭಗೊಳ್ಳಲಿರುವ ಬೃಹತ್ ಪ್ರತಿಭಟನಾ ಮೆರವಣಿಗೆ ಗಾಂಧಿ ಚೌಕ್, ಬಸವೇಶ್ವರ ವೃತ್ತ, ಡಾ.ಬಾಬಾ ಸಾಹೇಬ ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಲಾಗುವುದು. ಈ ಬೃಹತ್ ಹೋರಾಟದಲ್ಲಿ ಜಿಲ್ಲೆಯ ಎಲ್ಲ ಭಾಗದ ರೈತರು, ಮುಖಂಡರು, ದೇಶಭಕ್ತರು, ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಲು ಸ್ವಾಮಿ ವಿವೇಕಾನಂದ ಸೇನೆಯ ಅಧ್ಯಕ್ಷ ಚಂದ್ರಶೇಖರ ಚೌಧರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆ-ಸೆಟ್ ಪರೀಕ್ಷೆ: 24 ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಕ್ಟೋಬರ್ 11ರಂದು ಜಿಲ್ಲೆಯಲ್ಲಿ ನಡೆಯಲಿರುವ ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ-ಸೆಟ್2026) ಯನ್ನು ಸುಸೂತ್ರವಾಗಿ ಹಾಗೂ ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಜಿಲ್ಲೆಯ 24 ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ಜಿಲ್ಲಾ ದಂಡಾಧಿಕಾರಿ ಡಾ. ಆನಂದ ಕೆ. ಅವರು ಆದೇಶ ಹೊರಡಿಸಿದ್ದಾರೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ2023ರ ಕಲಂ 163ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಆದೇಶ ಹೊರಡಿಸಲಾಗಿದ್ದು, ಅಕ್ಟೋಬರ್ 11ರಂದು ಬೆಳಿಗ್ಗೆ 8.30 ಗಂಟೆಯಿಂದ ಪರೀಕ್ಷೆ ಮುಕ್ತಾಯವಾಗುವವರೆಗೆ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ.

ಪರೀಕ್ಷಾ ಕರ್ತವ್ಯದಲ್ಲಿ ತೊಡಗಿರುವ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಇತರರು ಮೊಬೈಲ್ ಫೋನ್ ತರುವುದನ್ನು ಹಾಗೂ ಬಳಸುವುದನ್ನು ನಿಷೇಧಿಸಲಾಗಿದೆ. ಅಲ್ಲದೆ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳು, ಕಂಪ್ಯೂಟರ್ ಕೇಂದ್ರಗಳು, ಸೈಬರ್ ಕೆಫೆಗಳು ಹಾಗೂ ಕೋಚಿಂಗ್ ಕೇಂದ್ರಗಳನ್ನು ಪರೀಕ್ಷೆ ನಡೆಯುವ ಅವಧಿಯಲ್ಲಿ ತೆರೆಯದಂತೆ ಆದೇಶದಲ್ಲಿ ಸೂಚಿಸಲಾಗಿದೆ.

## ವಸತಿ ನಿಲಯಗಳಿಗೆ ಬಾಡಿಗೆ ಕಟ್ಟಡಕ್ಕೆ ಅ.30ರೊಳಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಎರಡು ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಗಳಿಗಾಗಿ ಬಾಡಿಗೆ ಕಟ್ಟಡಗಳ ಅಗತ್ಯವಿದ್ದು, ಆಸಕ್ತ ಕಟ್ಟಡ ಮಾಲೀಕರಿಂದ ಅರ್ಜಿ ಆಹ್ವಾನಿಸಲಾಗಿದೆ.ಪ್ರತಿ ವಸತಿ ನಿಲಯದಲ್ಲಿ ತಲಾ 150 ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲು ಅನುಕೂಲವಾಗುವಂತೆ ಸಾಕಷ್ಟು ಸ್ಥಳಾವಕಾಶ, ನೀರು, ಸ್ನಾನಗೃಹ ಹಾಗೂ ಶೌಚಾಲಯ ಸೌಲಭ್ಯ ಹೊಂದಿರುವ ಕಟ್ಟಡಗಳ ಅಗತ್ಯವಿದೆ. ಸರ್ಕಾರ ನಿಗದಿಪಡಿಸುವ ಬಾಡಿಗೆ ಮಿತಿಗೆ ಒಳಪಟ್ಟು ಕಟ್ಟಡಗಳನ್ನು ಬಾಡಿಗೆಗೆ ನೀಡಲು ಆಸಕ್ತಿಯಿರುವ ಮಾಲೀಕರು ಅಗತ್ಯ ದಾಖಲೆಗಳೊಂದಿಗೆ ಅ. 30ರೊಳಗೆ ಅರ್ಜಿ ಸಲ್ಲಿಸಬೇಕು. ಆಸಕ್ತರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಡಿ. ದೇವರಾಜ ಅರಸು ಭವನ, ಜಿಲ್ಲಾ ಪಂಚಾಯಿತಿ ಕಚೇರಿ ಹತ್ತಿರ, ಕನಕದಾಸ ಬಡಾವಣೆ, ವಿಜಯಪುರ ಇಲ್ಲಿಗೆ ಸಲ್ಲಿಸಬಹುದು ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ಲಾಂಛನಗಳು ಮತ್ತು ಹೆಸರುಗಳ ಕಾಯ್ದೆ ಪಾಲನೆಗೆ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತ ಸರ್ಕಾರದ ಕೆಲವು ಲಾಂಛನಗಳು ಹಾಗೂ ಹೆಸರುಗಳನ್ನು ಪ್ರಮುಖವೆಂದು ಪರಿಗಣಿಸಿ, ಅವುಗಳ ಅನುಚಿತವಾಗಿ ಬಳಸುವುದನ್ನು ತಡೆಯಲು ಲಾಂಛನಗಳು ಮತ್ತು ಹೆಸರುಗಳ (ಅನುಚಿತ ಬಳಕೆ ತಡೆ) ಕಾಯ್ದೆ, 1950 ಜಾರಿಗೆ ತರಲಾಗಿದೆ. ಈ ಕಾಯ್ದೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಲಾಂಛನ ಮತ್ತು ಹೆಸರುಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ವ್ಯಾಪಾರ, ವ್ಯವಹಾರ, ಹಕ್ಕು ಸ್ವಾಮ್ಯದಲ್ಲಿ,ಚಿಹ್ನೆ ಅಥವಾ ವಿನ್ಯಾಸದಲ್ಲಿ ಬಳಸುವಂತಿಲ್ಲ. ಅಲ್ಲದೆ, ಕಾಯ್ದೆಯ ಸೆಕ್ಷನ್ 4ರ ಅನ್ವಯ, ಅಂತಹ ಹೆಸರುಗಳನ್ನು ನೋಂದಾಯಿಸಲು ಯಾವುದೇ ಸಕ್ಷಮ ಪ್ರಾಧಿಕಾರವು ಅನುಮತಿ ನೀಡುವಂತಿಲ್ಲ.ಆದಾಗ್ಯೂ, ಖಾಸಗಿ ಸಂಘ-ಸಂಸ್ಥೆಗಳಿಂದ ಅನೇಕ ಲಾಂಛನಗಳು ಮತ್ತು ಹೆಸರುಗಳ ನೋಂದಣಿಯಾಗುತ್ತಿರುವುದು ಕಂಡುಬಂದಿದೆ. ಇದರಿಂದ ಸಂಬಂಧಪಟ್ಟ ಸಂಘ-ಸಂಸ್ಥೆಗಳು ಸರ್ಕಾರದೊಂದಿಗೆ ಅಧಿಕೃತ ಸಂಬಂಧ ಹೊಂದಿವೆ ಎಂಬ ತಪ್ಪು ಕಲ್ಪನೆ ಸಾರ್ವಜನಿಕರಲ್ಲಿ ಮೂಡುವ ಸಾಧ್ಯತೆಯಿದೆ. ಆದ್ದರಿಂದ ಕಾಯ್ದೆಯ ಅನುಸೂಚಿಯಲ್ಲಿನ ಲಾಂಛನ ಮತ್ತು ಹೆಸರುಗಳ ಅನುಚಿತ ಬಳಕೆಯಾಗದಂತೆ ಕ್ರಮವಹಿಸಲು ಸರ್ಕಾರವು ಸುತ್ತೋಲೆಯಲ್ಲಿ ಸೂಚಿಸಿದೆ ಎಂದು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀಮತಿ ಎಸ್.ಕೆ. ಭಾಗ್ಯಶ್ರೀ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯುವ ಸಂಸತ್ತು ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ ಸಲಹೆ

## ಪ್ರಜಾಪ್ರಭುತ್ವದ ಮೌಲ್ಯಗಳನ್ನರಿತು ಜವಾಬ್ದಾರಿಯುತ ನಾಗರಿಕರಾಗಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ವಿದ್ಯಾರ್ಥಿಗಳು ಪ್ರಜಾಪ್ರಭುತ್ವದ ಮಹತ್ವ, ಸಂವಿಧಾನದ ಆಶಯಗಳು ಹಾಗೂ ಸಂಸದೀಯ ವ್ಯವಸ್ಥೆಯ ಕಾರ್ಯವೈಖರಿಯನ್ನು ಅರಿತುಕೊಂಡು ಜವಾಬ್ದಾರಿಯುತ ನಾಗರಿಕರಾಗಿ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಭವನದಲ್ಲಿ ಗುರುವಾರ ಆಯೋಜಿಸಿದ್ದ ವಿಜಯಪುರ ತಾಲೂಕು ಮಟ್ಟದ ಯುವ ಸಂಸತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ನಾಯಕತ್ವದ ಗುಣಗಳು ಹಾಗೂ ಸಾರ್ವಜನಿಕ ಸಮಸ್ಯೆಗಳ ಕುರಿತು ಚರ್ಚಿಸುವ ಮನೋಭಾವ ಬೆಳೆಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದರು.

ವಿದ್ಯಾರ್ಥಿಗಳು ಸಂವಿಧಾನ ನೀಡಿರುವ ಹಕ್ಕುಗಳ ಜೊತೆಗೆ ತಮ್ಮ ಕರ್ತವ್ಯಗಳನ್ನೂ ಅರಿತುಕೊಳ್ಳಬೇಕು. ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಪರಸ್ಪರ ಗೌರವದಂತಹ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಜಯಪುರ ತಹಶೀಲ್ದಾರ್ ಪ್ರಶಾಂತ ಚನಗೊಂಡ ಮಾತನಾಡಿ, ವಿದ್ಯಾರ್ಥಿಗಳು ಯುವ ಸಂಸತ್ತಿನಲ್ಲಿ ಅತ್ಯುತ್ತಮವಾಗಿ ಭಾಗವಹಿಸಿರುವುದು ಸಂತಸದ ಸಂಗತಿ. ಈ ತಂಡ ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ವಿಜಯಪುರ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಲಿ ಎಂದು ಶುಭ ಹಾರೈಸಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಯಿತು. ಯುವ ಸಂಸತ್ತಿನಲ್ಲಿ ವಿವಿಧ ಕಾಲೇಜುಗಳ 195 ವಿದ್ಯಾರ್ಥಿಗಳು ಭಾಗವಹಿಸಿ, ಸಂಸದೀಯ ಕಲಾಪದ ಮಾದರಿಯನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ವಿಜಯಪುರ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತ ಬೆಳ್ಳುಂಡಗಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಬಿರಾದಾರ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಹೊಸೂರ, ಸಹಾಯಕ ನಿರ್ದೇಶಕ ಬಿ.ಜೆ. ಇಂಡಿ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜ್ಯೋತಿ, ನವಭಾಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಶಿವಾನಂದ ಜಮಾದಾರ, ಪದವಿಪೂರ್ವ ಕಾಲೇಜಿನ ರಜಪೂತ್ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳ ನಿಲಯಪಾಲಕರು, ಸಿಬ್ಬಂದಿ, ಶಿಕ್ಷಕರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಶಿವಾನಂದ ಜಮಾದಾರ ವಂದಿಸಿದರು.

### ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯಲ್ಲಿ ಒಂದು ದಿನದ ರಾಷ್ಟ್ರೀಯ ವೆಬಿನಾರ್

## ಡಿಜಿಟಲ್ ಯುಗದಲ್ಲಿ ಜವಾಬ್ದಾರಿ ಅತ್ಯಗತ್ಯ :ಡಾ.ಸದಾಶಿವಮ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ರಾಜ್ಯಶಾಸ್ತ್ರ ವಿಭಾಗದಿಂದ ಅ.08 ರಂದು ಹಮ್ಮಿಕೊಳ್ಳಲಾಗಿದ್ದ 'ವಿಕ್‌ಸಿತ್ ಭಾರತ್@2047 : ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಆಡಳಿತವನ್ನು ಪರಿವರ್ತಿಸುವುದು' ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಆನ್ಲೈನ್ ವೆಬಿನಾರ್ ಹಮ್ಮಿಕೊಳ್ಳಲಾಯಿತು.

ವೆಬಿನಾರನಲ್ಲಿ ಸಂಪನ್ಮೂಲ ವ್ಯಕ್ತಿ ಮಿಜೋರಾಂ ವಿವಿ ಸಾರ್ವಜನಿಕ ಆಡಳಿತದ ಪ್ರಾಧ್ಯಾಪಕ ಡಾ.ಟಿ.ಸದಾಶಿವಮ್ 'ವಿಕ್‌ಸಿತ್ ಭಾರತ್@2047 : ಪರಿವರ್ತನಾ ಆಡಳಿತಕ್ಕೆ ವೇಗವರ್ಧಕವಾಗಿ ಸಾರ್ವಜನಿಕ ಆಡಳಿತ' ಎಂಬ ವಿಷಯದ ಕುರಿತು ವಿಚಾರ ಮಂಡಿಸಿದರು. ವಿಕ್ಷಿತ್ ಭಾರತ್ @2047 ರ ಪ್ರಮುಖ ಸ್ತಂಭಗಳು, ಹೊಸ ಸಾರ್ವಜನಿಕ ನಿರ್ವಹಣೆ,ಹೊಸ ಸಾರ್ವಜನಿಕ ಆಡಳಿತ, ಸಾರ್ವಜನಿಕ ಸೇವೆ, ಸಹಕಾರಿ ಆಡಳಿತ, ಡಿಜಿಟಲ್ ಯುಗದ ಆಡಳಿತ ಸಾಮರ್ಥ್ಯ, ಎಐ ಬಳಕೆ, ಅಭಿವೃದ್ಧಿ ಹೊಂದಿದ ಭಾರತವು ವ್ಯಾಪಾರ, ತಂತ್ರಜ್ಞಾನ ಮತ್ತು ಜಾಗತಿಕ ಕಾರ್ಯಸೂಚಿಗಳ ಬಗ್ಗೆ ಅತ್ಯಮೂಲ್ಯ ವಿಚಾರಗಳನ್ನು ಮಂಡಿಸಿದರು. ಹೈದ್ರಾಬಾದ್‌ನ ಆದಾಯ ತೆರಿಗೆ(ಐಆರ್-ಎಸ್) ಆಯುಕ್ತ ಶಹನವಾಜ್ ಉಲ್ ರೆಹಮಾನ್ 'ವಿಕ್‌ಸಿತ್ ಭಾರತ್@2047 : ಡಿಜಿಟಲ್ ಆಡಳಿತ ಮತ್ತು ಸಮಗ್ರ ಅಭಿವೃದ್ಧಿಯ ಪಾತ್ರ' ಎಂಬ ವಿಷಯದ ಕುರಿತು ವಿಚಾರವನ್ನು ಮಂಡಿಸಿ, ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಸರ್ಕಾರಿ ಸೇವೆಗಳು, ಮಾಹಿತಿ ಮತ್ತು ನಿರ್ಧಾರಗಳನ್ನು ವೇಗವಾಗಿ, ಪಾರದರ್ಶಕವಾಗಿ, ಜವಾಬ್ದಾರಿಯುತವಾಗಿ ಪ್ರತಿಯೊಬ್ಬ ನಾಗರಿಕರು ಪಡೆದುಕೊಳ್ಳಬಹುದು ಎಂದರು.

ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜಿನ ಪ್ರಾಚಾರ್ಯ ಡಾ.ಶ್ರೀನಿವಾಸ್ ಎ.ಟಿ ಮಾತನಾಡಿ, ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಆಡಳಿತವನ್ನು ಪರಿವರ್ತಿಸುವುದು ಅತ್ಯವಶ್ಯಕವಾಗಿದೆ. ಇಂದು ನಾವು ಆಧುನಿಕ ಜಗತ್ತಿನಲ್ಲಿ ಇದ್ದೇವೆ. ಇ-ಆಳಿತದ ಮಹತ್ವ, ಅರಿವು ಅವಶ್ಯಕ. ಕೇಂದ್ರ, ರಾಜ್ಯ ಸರ್ಕಾರಗಳು ಅಳವಡಿಸಿಕೊಂಡಿರುವ ಇ-ಆಡಳಿತ, ತಂತ್ರಜ್ಞಾನ, ಎಐ ಬಳಕೆ ವಿವಿಧ ಆಯಾಮಗಳ ಪರಿಣಾಮಗಳ ಅರಿವು ಕೂಡ ನಮ್ಮಲ್ಲಿರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ,ಎಸ್.ಎ.ಪಾಟೀಲ,ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ, ಸಂಚಾಲಕಿ ಡಾ.ತರನ್ನುಮ್ ಜಬೀನ್ ಖಾನ್, ಪ್ರೊ.ರೂಪಾ ಮೋಟಗಿ,ಡಾ.ಧಾನೇಶ್ವರಿ ಮೂಲಿಮನಿ, ಪ್ರೊ.ಪವನ್ ಮಹೀಂದ್ರಕರ, ಮಲಿಕ್ ಎಲ್.ಜಮಾದಾರ,ಭೀಮಸಿ ಮದರಕಂಡಿ, ಜಿ.ಎಂ. ಗೇಂಡ್,ಸಂತೋಷ ವಂಬಾಸೆ, ವಿರೇಶ ಕುಳಗೇರಿ ಹಾಗೂ ಆನಲೈನ್ ವೆಬಿನಾರ್ ನಲ್ಲಿ ವಿವಿಧ ರಾಜ್ಯದ ಪ್ರಾಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ಯುವ ಸಂಸತ್ತು ಅಧಿವೇಶನ

■ ಉದಯರಶ್ಮಿ ದಿನಪತ್ರಿಕೆ




ದೇವರಹಿಪ್ಪರಗಿ: ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು, ಸಂಸದೀಯ ಕಾರ್ಯವಿಧಾನಗಳ ಕುರಿತು ಜ್ಞಾನ, ಅರಿವು ಮೂಡಿಸುವ ತಾಲ್ಲೂಕು ಮಟ್ಟದ ಯುವ ಸಂಸತ್ತು ಅಧಿವೇಶನ 2026 ಶೈಕ್ಷಣಿಕ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಪಟ್ಟಣದ ಸಿದ್ಧೇಶ್ವರ ಪ್ರೌಢಶಾಲೆ ಸಭಾಭವನದಲ್ಲಿ ಶುಕ್ರವಾರ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿನೀಯರು ಹೆಚ್ಚಾಗಿ ಸಂಸತ್ತಿನ ಮಾದರಿಯಲ್ಲಿ ಚರ್ಚೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಅಧಿವೇಶನದ ಸಭಾಧ್ಯಕ್ಷರು, ಸಚಿವ ಸಂಪುಟದ ಸಚಿವರು ಹಾಗೂ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಮುಕ್ತ ಹಾಗೂ ಸೂಕ್ತ ಅವಕಾಶ ಕಲ್ಪಿಸುವುದರ ಮೂಲಕ ಅಧಿವೇಶನ ಯಶಸ್ವಿಗೊಳಿಸಿದರು.

ಅಧಿವೇಶನದಲ್ಲಿ ನಿರುದ್ಯೋಗ ಸಮಸ್ಯೆ, ಬೆಂಗಳೂರು ನಗರ ಅಭಿವೃದ್ಧಿ, ಪ್ರಾಥಮಿಕ ಶಿಕ್ಷಣ ವ್ಯವಸ್ಥೆ, ಗ್ರಾಮೀಣ ಕುಡಿಯುವ ನೀರು ಪೂರೈಕೆ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಿತಿಗತಿ, ಜಲಜೀವನ ಯೋಜನೆ, ಕಾಲುವೆಗೆ ನೀರು ಪೂರೈಕೆ, ಬರಗಾಲಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳು, ಮಾಹಿತಿ ತಂತ್ರಜ್ಞಾನದ ಸೈಬರ್ ಕ್ರೈಮ್, ರೈತರ ಸಾಲಮನ್ನಾದಂತ ಪ್ರಚಲಿತ ವಿದ್ಯಮಾನಗಳ ಕುರಿತು ನಡೆದ ಚರ್ಚೆಗಳು ವಿಶೇಷ ಗಮನ ಸೆಳೆದವು. ತಹಶೀಲ್ದಾರ್ ನಿಂಗಪ್ಪ ಬಿರಾದಾರ, ಗ್ರೇಡ್-2 ತಹಶೀಲ್ದಾರ್ ಎಂ.ಜಿ.ಬಿರಾದಾರ, ಶಿರಸ್ತೇದಾರ ಸುರೇಶ ಮ್ಯಾಗೇರಿ, ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ, ಬಿಇಓ ಟಿ.ಎಸ್.ಆಲಗೂರ, ಶಿಕ್ಷಣ ಸಂಯೋಜಕ ಎಸ್.ಎಮ್.ಕಪನಿಂಬರಗಿ, ಸಿಆರ್‌ಪಿ ವಿಜಯಲಕ್ಷ್ಮೀ ನವಲಿ, ಸಮಾಜ ಕಲ್ಯಾಣ ಇಲಾಖೆಯ ಭವಾನಿ ಪಾಟೀಲ ಸಿದ್ಧೇಶ್ವರ ಸ್ವಾಮೀಜಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ವ್ಹಿ.ಕೆ.ಪಾಟೀಲ, ಆಡಳಿತಾಧಿಕಾರಿ ಕೆ.ಪಿ.ಮಾಲಿಪಾಟೀಲ, ಶಿಕ್ಷಕ ಜಿ.ಪಿ.ಬಿರಾದಾರ ಸಹಿತ ವಿದ್ಯಾರ್ಥಿಗಳು, ಸಿಬ್ಬಂದಿ ಇದ್ದರು.

## ಮುಂಗುರುಳ ಮರೆಯ ಚುಂಬನ

■ ಉದಯರಶ್ಮಿ ದಿನಪತ್ರಿಕೆ




ಜಯಶ್ರೀ ಜೆ ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

ಈ ಪತ್ರ ನಿನ್ನ ಕೈ ಸೇರಿದಾಗ ನಿನ್ನ ಮುಖದಲ್ಲಿ ಮೂಡುವ ಆ ಸಣ್ಣ ಮುಗುಳ್ನಗೆಯನ್ನು ನೋಡುವ ಅದೃಷ್ಟ ನನಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ವಾ? ಹೊರಗೆ ತಂಗಾಳಿ ಬೀಸುತ್ತಿದ್ದರೆ, ನನ್ನ ಮನಸ್ಸಿನ ಕೋಣೆಯೊಳಗೆ ನಿನ್ನದೇ ನೆನಪುಗಳ ಬೆಳದಿಂಗಳು ಆವರಿಸಿದೆ. ಪ್ರೀತಿಯೇ, ನಿನ್ನನ್ನು ಕಂಡ ದಿನದಿಂದ ಈ ಜಗತ್ತು ನನಗೆ ಕೇವಲ ಮಣ್ಣು-ಮರಗಳ ಜಗತ್ತಾಗಿ ಉಳಿದಿಲ್ಲ; ಅದು ನಿನ್ನ ಪ್ರೀತಿಯ ಬಣ್ಣಗಳಿಂದ ಸೃಷ್ಟಿಯಾದ ಒಂದು ಸುಂದರ ಕಾವ್ಯದಂತೆ ಕಾಣಿಸುತ್ತಿದೆ.

ನಮ್ಮ ಹಿರಿಯರು ಹೇಳುತ್ತಾರೆ"ಕಣ್ಣು ಮನಸ್ಸಿನ ಕನ್ನಡಿ" ಎಂದು. ಆದರೆ ಆ ಕನ್ನಡಿಯೊಳಗೆ ನನ್ನ ಮುಖಕ್ಕಿಂತ ಹೆಚ್ಚಾಗಿ ನಿನ್ನದೇ ಸುಂದರ ಬಿಂಬ ಮೂಡಿ ನಿಂತಿರುತ್ತದೆ. ನಿನ್ನ ಆ ಕವಿತೆಯಂತಹ ಕಣ್ಣುಗಳನ್ನು ಮೊದಲ ಬಾರಿಗೆ ನೋಡಿದಾಗ, ನನ್ನ ಹೃದಯದ ಬಡಿತಕ್ಕೆ ಹೊಸದೊಂದು ರಾಗ ಸಿಕ್ಕಂತಾಯಿತು. ನಿನ್ನ ನಡೆಗೆಯಲಿರೋ ಆ





ಜಿಂಕೆಯ ಚುರುಕು, ನಿನ್ನ ನಗುವಿನಲ್ಲಿರೋ ಆ ಮಲ್ಲಿಗೆಯ ಪರಿಮಳ ನನ್ನ ಇಡೀ ಬದುಕನ್ನು ಆವರಿಸಿಬಿಟ್ಟಿದೆ. ನೀನೊಂದು ಅದ್ಭುತ ಸುಂದರ ರಂಗುರಂಗಿನ ಚಿಟ್ಟೆ; ನಿನ್ನ ಪ್ರೀತಿಯ ರೆಕ್ಕೆಗಳ ಸದ್ದಿಗೆ ನನ್ನೊಳಗಿನ ನಿಶ್ಶಬ್ದವೆಲ್ಲಾ ಮೆಲ್ಲನೆ ಕರಗಿಹೋಗಿದೆ.

ಬೆಳದಿಂಗಳ ಆ ದಿವ್ಯ ರಾತ್ರಿಯಲಿ, ಮಲೆನಾಡಿನ ಮಂಜಿನ ಮುಸುಕಿನಡಿ ನಾವು ಮುಖಾಮುಖಿ ನಿಂತಿದ್ದ ಆ ಕ್ಷಣ ನನಗಿನ್ನೂ ಹಸಿರಾಗಿದೆ. ಎಲೆಗಳ ತುದಿಯಿಂದ ಜಾರುತ್ತಿದ್ದ ಹಿಮದ ಹನಿಗಳು ಮುತ್ತಿನ ಮಣಿಗಳಂತೆ ಹೊಳೆಯುತ್ತಿದ್ದರೆ, ತಂಗಾಳಿಯು ನಮ್ಮ ಪ್ರೀತಿಯ ಕಾವ್ಯಕ್ಕೆ ಜೋಗುಳ ಹಾಡುತ್ತಿತ್ತು. ಆ ಸುಂದರ ಘಳಿಗೆಯಲ್ಲಿ ನನ್ನ ಕೈಗಳು ನಿನ್ನ ಕೆನ್ನೆಯ ಮೇಲಿದ್ದ ಮುಂಗುರುಳನ್ನು ಮೆಲ್ಲನೆ ಸರಿಸಿದಾಗ, ಇಡೀ ಪ್ರಕೃತಿಯೇ ತನ್ನ ಶ್ವಾಸ ಬಿಗಿಹಿಡಿದು ನಿಂತಂತಿತ್ತು. ನಿನ್ನ ತಾವರೆಯಂತಹ ಕಣ್ಣುಗಳು ನಾಚಿಕೆಯಿಂದ ಅರೆಮುಚ್ಚಿದ ಆ ಅಮೃತ ಘಳಿಗೆಯಲ್ಲಿ, ನನ್ನ ತುಟಿಗಳು ನಿನ್ನ ಹಣೆಯನ್ನು ಸ್ಪರ್ಶಿಸಿದವು. ಆ ನಮ್ಮ ಪ್ರಥಮ ಚುಂಬನದ ಮಧುರ ಒಲವಿನ ದೃಶ್ಯಕ್ಕೆ, ಎಲೆಗಳಿಂದ ಜಾರಿದ ಹಿಮದ ಹನಿಗಳೇ ಮುತ್ತಿನ ಅಕ್ಷತೆಯಾದವು. ಕಾಲವೇ ಸ್ತಬ್ಧವಾದ ಆ ಕ್ಷಣ, ನಮ್ಮಿಬ್ಬರ ಆತ್ಮಗಳು ಒಂದಾಗಿ ಹೊಸ ಪ್ರೇಮಕಾವ್ಯವನ್ನು ಬರೆದಿದ್ದವು. ನನ್ನ ಕೈಯೊಳಗೆ ನಿನ್ನ ಮೃದುವಾದ ಹಸ್ತವಿದ್ದ ಆ ಘಳಿಗೆಯಲ್ಲಿ, ಜಗತ್ತಿನ ಎಲ್ಲಾ ಚಳಿಯೂ ಮಾಯವಾಗಿ ಪ್ರೀತಿಯ ಬೆಚ್ಚಗಿನ ಒಲವು ನಮ್ಮನ್ನು ಆವರಿಸಿತ್ತು.

ನಿನ್ನ ಕಣ್ಣುಗಳಲ್ಲಿದ್ದ ನಾಚಿಕೆಯ ಕೆಂಪು ತಾವರೆ, ಪ್ರೀತಿಯ ತಂಗಾಳಿಗೆ ಮೆಲ್ಲನೆ ಕಂಪಿಸಿತು. ಮರುಕ್ಷಣವೇ, ನನ್ನ ತೋಳುಗಳ ಬಂಧನಕ್ಕೆ ನಿನ್ನ ಒಡಲನ್ನು ಒಪ್ಪಿಸುತ್ತಾ, ಬಿಗಿಯಾಗಿ ಆಲಂಗಿಸಿಕೊಂಡೆ. ನಿನ್ನ ಹೃದಯದ ತೀವ್ರ ಬಡಿತವು ನನ್ನ ಎದೆಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದ ಆ ದಿವ್ಯ ಘಳಿಗೆಯಲ್ಲಿ, ನೀನು ನಿನ್ನ ಮೃದುವಾದ ಅಧರಗಳಿಂದ ನನ್ನ ಕೆನ್ನೆಯ ಮೇಲೆ ಪ್ರೀತಿಯ ಮರು-ಚುಂಬನವನ್ನು ಮುದ್ರಿಸಿದೆ. ಆ ಪ್ರೇಮದ ತಬ್ಬಿಕೆಯಲ್ಲಿ ಇಡೀ ಜಗತ್ತಿನ ಕತ್ತಲೆಯು ಮರೆಯಾಗಿ, ನಾವಿಬ್ಬರೂ ಪ್ರೀತಿಯ ಜ್ಯೋತಿಯಂತೆ ಕರಗಿಹೋಗಿದ್ದೆವು. ಒಮ್ಮೊಮ್ಮೆ ಯೋಚಿಸುತ್ತೇನೆ, ನೀನು ಸಿಗುವ ಮುನ್ನ ನನ್ನ ದಿನಗಳು ಹೇಗೆ ಕಳೆಯುತ್ತಿದ್ದವು ಎಂದು. ಬಹುಶಃ ಅವು 'ಒಣಗಿದ ಮರದ



ಎಲೆಗಳಂತೆ' ಗಾಳಿಯಲ್ಲಿ ದಿಕ್ಕಿಲ್ಲದೆ ತೇಲುತ್ತಿದ್ದವು. ಆದರೆ ನೀನು ನನ್ನ ಬದುಕಿಗೆ ಬಂದ ಮೇಲೆ, ಬರಡು ಭೂಮಿಯಂತಿದ್ದ ನನ್ನ ಎದೆಯಾಳದಲ್ಲಿ ಪ್ರೀತಿಯ ಹಸಿರು ಚಿಗುರೊಡೆಯಿತು. ಕಾಲವೆಂಬುದು ಹರಿಯುವ ನದಿಯ ನೀರಿದ್ದಂತೆ; ಅದನ್ನು ಹಿಡಿದಿಡಲಾಗದು ಎನ್ನುತ್ತಾರೆ. ಆದರೆ ನಿನ್ನ ಜೊತೆ ಕಳೆಯುವ ಪ್ರತಿಯೊಂದು ಕ್ಷಣವೂ ನನಗೆ ಕಾಲವೇ ನಿಂತುಹೋದಂತೆ ಭಾಸವಾಗುತ್ತದೆ. ಆ ಕ್ಷಣಗಳು ನನ್ನ ನೆನಪಿನ ಪುಟಗಳಲ್ಲಿ 'ಬಂಗಾರದ ಅಕ್ಷರಗಳಂತೆ' ಶಾಶ್ವತವಾಗಿ ಅಚ್ಚೊತ್ತಿ ಉಳಿಯುತ್ತವೆ.

ನನ್ನೊಲವೇ, ನಿನ್ನ ಪ್ರೀತಿ ನನಗೆ ಕೇವಲ ಒಂದು ಭಾವನೆಯಲ್ಲ; ಅದು ನನ್ನ ಉಸಿರಾಟದಷ್ಟೇ ಸಹಜ ಮತ್ತು ಅನಿವಾರ್ಯ. ದಿನವಿಡೀ ಜಗತ್ತಿನ ಸಾವಿರಾರು ಕೆಲಸಗಳ ನಡುವೆ ನಾನಿದ್ದರೂ, ನನ್ನ ಮನಸ್ಸಿನ ಸೂತ್ರ ಮಾತ್ರ 'ನೂಲಿನ ತುದಿಗೆ ಕಟ್ಟಿದ ಗಾಳಿಪಟದಂತೆ' ಸದಾ ನಿನ್ನತ್ತಲೇ ಹಾರುತ್ತಿರುತ್ತದೆ. ರಾತ್ರಿಯ ಕತ್ತಲಲ್ಲಿ ಆಕಾಶದ ಚಂದ್ರನನ್ನು ನೋಡಿದಾಗೆಲ್ಲಾ ನನಗೆ ನಿನ್ನ ಮುಖವೇ ನೆನಪಾಗುತ್ತದೆ. ಆ ಚಂದ್ರನಿಗಾದರೂ ಕಲೆಗಳಿವೆ, ಆದರೆ ನಿನ್ನ ನಿಷ್ಕಲ್ಮಶ ಪ್ರೀತಿಯಲ್ಲಿ ಯಾವುದೇ ಕಲೆಗಳಿಲ್ಲ. ನೀನು ನನ್ನ ಪಾಲಿಗೆ ಕೇವಲ ಗೆಳತಿಯಲ್ಲ; ನನ್ನ ಬದುಕಿನ ಹಾದಿಗೆ ದೀಪವಾದ ದೇವತೆ.

ಬದುಕಿನ ಹಾದಿ ಯಾವಾಗಲೂ ಹೂವಿನ ಹಾಸಿಗೆಯಾಗಿರುವುದಿಲ್ಲ ಎಂಬುದು ನನಗೂ ಗೊತ್ತು. ಮುಂದೆ ಕಷ್ಟದ ದಿನಗಳು ಬರಬಹುದು, ಸುಂಟರಗಾಳಿಯಂತೆ ಸಮಸ್ಯೆಗಳು ಎದುರಾಗಬಹುದು. ಆದರೆ ಒಂದು ಮಾತು ನೆನಪಿರಲಿ ಗೆಳತಿ, ಆಕಾಶವೇ ಮುರಿದು ಬಿದ್ದರೂ, ಜಗತ್ತೇ ನಮ್ಮ ವಿರುದ್ಧ ನಿಂತರೂ, ನನ್ನ ಈ ಕೈಗಳು ನಿನ್ನ ಕೈಗಳನ್ನು ಎಂದಿಗೂ ಬಿಡುವುದಿಲ್ಲ. ನಿನ್ನ ಕಣ್ಣಿನಿಂದ ಒಂದು ಹನಿ ನೀರು ಕೆಳಗೆ ಬೀಳಲು ನಾನು ಬಿಡುವುದಿಲ್ಲ;



ಒಂದು ವೇಳೆ ಬಿದ್ದರೂ ಅದನ್ನು ಒರೆಸುವ ಮೊದಲ ಹಸ್ತ ನನ್ನದೇ ಆಗಿರುತ್ತದೆ. ನಿನ್ನ ಮುಗುಳ್ನಗೆಯನ್ನು ರಕ್ಷಿಸುವುದೇ ನನ್ನ ಬದುಕಿನ ಅತಿ ದೊಡ್ಡ ಧರ್ಮ.

ಆಕಾಶದ ತಾರೆಗಳು ಮರೆಯಾದರೂ, ಕಾಲದ ಚಕ್ರವೇ ನಿಂತುಹೋದರೂ, ನನ್ನ ಹೃದಯದ ಕೊನೆಯ ಬಡಿತದವರೆಗೂ ನಿನ್ನನ್ನೇ ಪ್ರೀತಿಸುತ್ತಿರುತ್ತೇನೆ. ಈ ಜನ್ಮದಲ್ಲಷ್ಟೇ ಅಲ್ಲ, ಮುಂದಿನ ನೂರು ಜನ್ಮಗಳಿದ್ದರೂ ನಾನು ಬರೀ ನಿನ್ನವನೇ. ಹಾಡೊಂದು ತನ್ನ ರಾಗವನ್ನು ಹುಡುಕುವಂತೆ, ನನ್ನೀ ಜೀವ ದಿನವೂ ನಿನ್ನ ಪ್ರೀತಿಯನ್ನೇ ಹುಡುಕುತ್ತಿರುತ್ತದೆ. ಕಣ್ಣು ಮುಚ್ಚಿ ಮಲಗು ಗೆಳತಿ, ನಿನ್ನ ಕನಸುಗಳಿಗೆ ಕಾವಲು ಕಾಯಲು ನಾನಿರುತ್ತೇನೆ. ಪ್ರೀತಿಗಿಂತ ಮಿಗಿಲಾದ ಪದವಿದ್ದರೆ, ಅದೇ ನೀನು..

ನಿನ್ನದೇ ನೆರಳಾಗಿರುವ,
ನಿನ್ನ ಪ್ರೀತಿಯ ರಾಜಕುಮಾರ.

# ಮರಡಿಸಿದ್ದೇಶ್ವರ ದೇವಸ್ಥಾನದಲ್ಲಿ ಘಟಸ್ಥಾಪನೆ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ತಾಲ್ಲೂಕಿನ ಹೊನವಾಡ ಗ್ರಾಮದ ಆರಾಧ್ಯ ದೈವ ಮರಡಿಸಿದ್ದೇಶ್ವರ ದೇವಸ್ಥಾನದಲ್ಲಿ ಅ. 11ರಂದು ಘಟಸ್ಥಾಪನೆ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಸತ್ಯಪ್ಪ ವಿಠಪ್ಪ ಪೂಜಾರಿ ಅವರು 11 ದಿನಗಳ ಕಾಲ ಉಪವಾಸ ವ್ರತ ಆಚರಿಸಿ ವಿಶೇಷ ಪೂಜೆ ನೆರವೇರಿಸಲಿದ್ದಾರೆ. ವ್ರತಾಚರಣೆಯಲ್ಲಿರುವ ಪೂಜಾರಿಗೆ ಪ್ರತಿದಿನ ಎಣ್ಣೆ ಮಜ್ಜನ ಹಾಗೂ ರಾತ್ರಿ ಡೊಳ್ಳಿನ ಪದಗಳ ಸೇವೆ ನಡೆಯಲಿದೆ.

ಸ್ವತಃ ಮರಡಿ ಸಿದ್ದೇಶ್ವರ ದೇವರು ದಿ. ಗಿರಮಲ್ಲಪ್ಪ ಕೋಟಿ ಅವರ ಹಿರಿಯ ಮಗಳು ಅಥವಾ ಹಿರಿಯ ಸೊಸೆಯವರ ಸ್ವಪ್ನದಲ್ಲಿ ಕಾಣಿಸಿಕೊಂಡು ವ್ರತಧಾರಿ ಪೂಜಾರಿಗೆ ಹೇಳುತ್ತಾರೆ. ಊರಿನ ಭಕ್ತರ ಮನೆಗಳಲ್ಲಿ ನಡೆಯುವ ಫಳಾರ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳ ಕುರಿತು ಸೂಚನೆ ನೀಡುತ್ತಾರೆ ಎಂಬ ನಂಬಿಕೆ ಭಕ್ತರಲ್ಲಿದೆ. ವ್ರತಧಾರಿ ಪೂಜಾರಿ ಹಾಲು ಮತ್ತು ಬಾಳೆಹಣ್ಣು ಮಾತ್ರ ಸೇವಿಸಲಿದ್ದಾರೆ. ಪಾಡ್ಯ ದಿನದಂದು ವರ್ಷದ ಭವಿಷ್ಯ ನುಡಿಗಳು ಹೊರಬೀಳಲಿವೆ. ಸೀಮೋಲ್ಲಂಘನ ಸಂದರ್ಭದಲ್ಲಿ ಭಕ್ತರಿಗೆ ಫಲ–ಪುಷ್ಪ ವಿತರಿಸಲಾಗುವುದು ಎಂದು ದೇವಸ್ಥಾನದ ಧರ್ಮದರ್ಶಿ ಧರೆಪ್ಪ ಯಚ್ಚಿ ತಿಳಿಸಿದ್ದಾರೆ.

# ಭಾಷಾ ನದಾಫ್ ರಾಜ್ಯಾಧ್ಯಕ್ಷರಾಗಿ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಗ್ರೇಡ್–1 ಕಾರ್ಯದರ್ಶಿಗಳ ಕ್ಷೇಮಾಭಿವೃದ್ಧಿ ಸಂಘ (ನೋಂ.), ಬೆಂಗಳೂರಿನ ನೂತನ ರಾಜ್ಯಾಧ್ಯಕ್ಷರಾಗಿ ವಿಜಯಪುರ ಜಿಲ್ಲೆಯ ಯಂಕಂಚಿ ಗ್ರಾಮ ಪಂಚಾಯಿತಿಯ ಗ್ರೇಡ್–1 ಕಾರ್ಯದರ್ಶಿ ಭಾಷಾ ನದಾಫ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಜಯಪುರ ಜಿಲ್ಲೆಯ ಯಂಕಂಚಿ ಗ್ರಾಮ ಪಂಚಾಯಿತಿಯ ಗ್ರೇಡ್–1 ಕಾರ್ಯದರ್ಶಿಯೊಬ್ಬರು ರಾಜ್ಯಮಟ್ಟದ ಸಂಘಟನೆಯ ಉನ್ನತ ಜವಾಬ್ದಾರಿಗೆ ಅವಿರೋಧವಾಗಿ ಆಯ್ಕೆಯಾಗಿರುವುದು ಜಿಲ್ಲೆಯ ಮಟ್ಟಿಗೆ ಗಮನಾರ್ಹ ಸಂಗತಿಯಾಗಿದೆ. ಗ್ರಾಮ ಪಂಚಾಯಿತಿ ಗ್ರೇಡ್–1 ಕಾರ್ಯದರ್ಶಿಗಳ ಕ್ಷೇಮಾಭಿವೃದ್ಧಿ, ಸೇವಾ ಹಿತಾಸಕ್ತಿಗಳ ರಕ್ಷಣೆ ಮತ್ತು ಸಂಘಟನೆಯ ಬಲವರ್ಧನೆಗೆ ನೂತನ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಸಂಘವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿ ಎಂಬುದು ಸದಸ್ಯರ ಆಶಯವಾಗಿದೆ.

# ಮೈಸೂರು ದಸರಾ ಕಾರ್ಯಕ್ರಮಕ್ಕೆ ಶ್ರೀಗಳಿಗೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ



ಚಿಮ್ಮಡ: ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟಣಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಚಿಮ್ಮಡ ಗ್ರಾಮದ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳನ್ನು ಅಹ್ವಾನಿಸಿರುವುದಕ್ಕೆ ಶ್ರೀಮಠದ ಭಕ್ತವೃಂದ ಸಂತಸವ್ಯಕ್ತಪಡಿಸಿದೆ.ಮುಖ್ಯಮಂತ್ರಿಗಳ ಆಶಯದೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿಯವರ ವಿಶೇಷ, ಅಧೀಕೃತ ಆಹ್ವಾನ ಪತ್ರಿಕೆಯನ್ನು ಘನ ಸರಕಾರದ ಪರವಾಗಿ ಗ್ರಾಮ ಆಢಳಿತ ಅಧಿಕಾರಿ ಮಂಜುನಾಥ ನೀಲನ್ನವರ ಶ್ರೀಗಳನ್ನು ಭೇಟಿಯಾಗಿ ಗೌರವ ಸನ್ಮಾನದೊಂದಿಗೆ ಆಹ್ವಾನಿಸಿದರು.

# ಜಿ–ಟ್ಯಾಗ್ ತಳಿ ತೊಗರಿಗೆ ಹೆಚ್ಚಿನ ಬೆಂಬಲ ಬೆಲೆ ನೀಡಿ




ಕಲಬುರಗಿ:ಕಲಬುರಗಿ ಜಿಲ್ಲೆ ರಾಜ್ಯದ ತೊಗರಿ ಕಣಜ ಎಂದು ಹೆಸರುವಾಸಿಯಾಗಿದೆ. ಕೇಂದ್ರ ಸರ್ಕಾರ ಕಲಬುರಗಿ ತೊಗರಿಗೆ ಜಿ–ಟ್ಯಾಗ್ ನೀಡಿದ್ದು, ಹೊರ ರಾಜ್ಯ ಮತ್ತು ಹೊರ ದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ. ಜಿ–ಟ್ಯಾಗ್ ತಳಿ ತೊಗ–ರಿಗೆ ಬೇರೆ ತೊಗರಿ ತಳಿಗಳಿಗಿಂತ ಹೆಚ್ಚಿನ ಬೆಂಬಲ ಬೆಲೆ ನೀಡಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಡಾ.ಸಿದ್ರಾಮಪ್ಪ ಪಾಟೀಲ ಧಂಗಾಪುರ ಒತ್ತಾಯಿಸಿದ್ದಾರೆ.

ಈ ಸಂಬಂಧ ಕೃಷಿ ಸಚಿವ ಹಾಗೂ ಕೃಷಿಕ ಸಮಾಜದ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಅವ–ರಿಗೆ ಮನವಿ ಪತ್ರ ಸಲ್ಲಿಸಿರುವ ಅವರು, ಸರ್ಕಾರ ಮೌಲ್ಯವರ್ಧಿತ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು, ಆರೋಗ್ಯ ಆವಿಷ್ಕಾರ, ಶಿಕ್ಷಣ ಆವಿಷ್ಕಾರದಂತೆ ಕೃಷಿ ಆವಿಷ್ಕಾರ ಮಾಡಲು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸೂಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ತೊಗರಿ ಮಂಡಳಿಗೆ ಹೆಚ್ಚಿನ ಅನುದಾನ ನೀಡುವುದರ ಜೊತೆಗೆ ಅಗತ್ಯವಾದ ಸಿಬ್ಬಂದಿ ನೇಮಕ ಮಾಡಬೇಕು, ಕಲಬುರಗಿ ಜಿಲ್ಲೆಯನ್ನು ಸರ್ಕಾರ ಬರಪೀಡಿತ ಎಂದು ಘೋಷಿಸಿದ್ದು, ಬೆಳೆ ಹಾನಿಯಾದ ರೈತರಿಗೆ ಮಧ್ಯಂತರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

# ಅನಿರ್ದಿಷ್ಟ ಧರಣಿ ಹಿಂದಕ್ಕೆ



ಕಲಬುರಗಿ: ನರಿಬೋಳ ಚಾಮನೂರಿನ ಅಪೂರ್ಣವಾದ ಸೇತುವೆ ಪೂರ್ಣಗೊಳಿಸಲು ಆಗ್ರಹಿಸಿ ನಡೆಸುತ್ತಿದ್ದ ಅನಿರ್ದಿಷ್ಟ ಧರಣಿಯನ್ನು ಅಧಿಕಾರಿಗಳ ಭರವಸೆಯ ಹಿನ್ನೆಲೆಯಲ್ಲಿ ಹಿಂದಕ್ಕೆ ಪಡೆಯಲಾಗಿದೆ ಎಂದು ಕ.ಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್ ಪಾಟೀಲ ನರಿಬೋಳ ತಿಳಿಸಿದ್ದಾರೆ. ಧರಣಿಯ ನಾಲ್ಕನೆ ದಿನ ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾ–ರಿಗಳು ಧರಣಿ ಸ್ಥಳಕ್ಕೆ ಆಗಮಿಸಿ ಒಂದು ತಿಂಗಳ ಒಳಗಡೆ ಭೂಈಸ್ವಾಧೀನ ಪ್ರಕ್ರಿಯೆ ಮುಗಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸುವ ಭರವಸೆ ನೀಡಿದ್ದಾರೆ .ಎಂಎಲ್ಸಿ ಚುನಾವಣೆ ಸಂಬಂಧವಾಗಿ ನೋಟಿಫಿಕೇಷನ್ ಮಾಡಲಿಕ್ಕೆ ಆಗುವುದಿಲ್ಲ.ಚುನಾವಣೆ ಮರುದಿವಸವೆ ಪ್ರಕ್ರಿಯೆ ಪ್ರಾರಂಭಿಸಲಾಗುವದು ಎಂದು ಅಧಿಕಾರಿಗಳು ತಿಳಿಸಿದರು.ಈ ಭರವಸೆಯಂತೆ ನಡೆಯಬೇಕು ಇಲ್ಲದಿದ್ದರೆ ಇದಕ್ಕಿಂತಲೂ ಉಗ್ರವಾದ ಹೋರಾಟ ನಡೆಸಲಾಗುವದು ಎಂದು ಹೋರಾಟಗಾರರು ತಿಳಿಸಿದರು. ಈ ಸಂದರ್ಭದಲ್ಲಿ ಬಹುಜನ ಪಾರ್ಟಿ ರಾಜ್ಯ ಕಾರ್ಯದರ್ಶಿ ಹುಚ್ಚೇಶ್ವರ ವಠಾರ, ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ಸ್ವಾದಿ ,ವಿಜಯಸೇನೆ ಜಿಲ್ಲಾದ್ಯಕ್ಷ ಪೃಥ್ವಿರಾಜ ರಾಂಪೂರ ,ಗುರಣ್ಣ ಹೈನಾಪೂರ, ಸುಮಾ ಕವಲ್ದಾರ ,ಸಂತೋಷ ಪಾಟೀಲ ಇಟಗಿ, ನಿಂಗಣ್ಣ ಗಡ್ಡದ ನರಿಬೋಳ ಇನ್ನಿತರ ಹೋರಾಟಗಾರರು ಇದ್ದರು.

# ದುಶ್ಚಟ ಮುಕ್ತ ಸಮಾಜಕ್ಕೆ ವ್ಯಸನಿಗಳು ಪಣತೊಡಲಿ :ಪೂಜಾರಿ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಮದ್ಯವ್ಯಸನದಿಂದ ಆರೋಗ್ಯ, ಕುಟುಂಬದ ನೆಮ್ಮದಿ ಹಾಳಾಗುತ್ತದೆ. ದುಶ್ಚಟಗಳಿಂದ ದೂರವಿದ್ದು, ಆರೋಗ್ಯಕರ ಜೀವನ ನಡೆಸುವ ಮೂಲಕ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ದಿನೇಶ ಪೂಜಾರಿ ಹೇಳಿದರು.

ಇಂಡಿ ತಾಲೂಕಿನ ಚಡಚಣ ವಲಯದ ಚೌಡೇಶ್ವರಿ ಸಭಾಭವನದಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ 2132ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನು ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕಧೋಂಡ ಹಾಗೂ ಪ್ರಾದೇಶಿಕ ನಿರ್ದೇಶಕ ದಿನೇಶ ಪೂಜಾರಿ ಉದ್ಘಾಟಿಸಿದರು. ಸಮಾರಂಭವು ಷಡಕ್ಷರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು.

ಶಾಸಕ ವಿಠಲ ಕಟಕದೊಂಡ ಮಾತನಾಡಿ, ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಕಳೆದ ನಾಲ್ಕು ದಶಕಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮದ್ಯವರ್ಜನ ಶಿಬಿರಗಳು ವ್ಯಸನಿಗಳ ಜೀವನದಲ್ಲಿ ಬದಲಾವಣೆ ತರುವುದರ ಜೊತೆಗೆ ಕುಟುಂಬಗಳ ಕಣ್ಣೀರು ಒರೆಸುವ ಮಹತ್ವದ ಕಾರ್ಯಗಳಾಗಿವೆ. ಸರ್ಕಾರದ ವಿವಿಧ ಜನಪರ ಕಾರ್ಯಗಳಿಗೆ ಪೂರಕವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಪ್ರಕಾಶ ಚವ್ಹಾಣ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಅನೇಕ ಕುಟುಂಬಗಳಿಗೆ ಆಸರೆಯಾಗಿದ್ದು, ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಸಾಮಾಜಿಕ ಕಳಕಳಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದರು.

ಈಶ್ವರಿ ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯದ ಚಡಚಣ ಕೇಂದ್ರದ ಕು. ಬಿ.ಕೆ. ಶ್ರೀದೇವಿ ಅಕ್ಕ ಮಾತನಾಡಿದರು.

ಒಂದು ವಾರದ ಕಾಲ ನಡೆದ ಶಿಬಿರದಲ್ಲಿ 50 ಮದ್ಯವ್ಯಸನಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿ, ಮನಪರಿವರ್ತನೆ ಹಾಗೂ ವ್ಯಸನಮುಕ್ತ ಜೀವನದ ಕುರಿತು ಮಾರ್ಗದರ್ಶನ ನೀಡಲಾಯಿತು.

ಶಿಬಿರದ ಗೌರವಾಧ್ಯಕ್ಷ ಕಾಂತುಗೌಡ ಪಾಟೀಲ, ಅಧ್ಯಕ್ಷ ಬಾಬುಗೌಡ ಬಿರಾದಾರ, ಸೋಮಶೇಖರ ಬಡಿಗೇರ, ಕೆ.ಪಿ. ಬೊಳೆಗಾವ, ದೇವೇಂದ್ರಪ್ಪಗೌಡ ಪಾಟೀಲ, ಸಂಗಮೇಶ ಅವಜಿ, ಕಾಶಿಬಾಯಿ ವಾಲಿಕಾರ, ಎಂ.ವಿ. ಕಟಗೇರಿ, ಇಲಾಯಿ ನಧಾಫ, ಪ್ರಕಾಶ ಭಂಡಕರವಟೆ, ರಾಮಲಿಂಗಪ್ಪ ಮಾಲಪೂರ, ರುದ್ರಪ್ಪ ಪೂಜಾರಿ, ಶಿವಣ್ಣ ಪಾಂಡ್ರೆ, ಆರ್.ಎಸ್. ಬಣಗಾರ, ಮಹೇಶ ಚೌದರಿ, ದಶರಥ ಬನಶೋಡೆ, ಮೇಲ್ವಿಚಾರಕರಾದ ಶಿವಯ್ಯ ಹಿರೇಮಠ, ಮಹಾಂತೇಶ ವಿ.ಎ., ಸುದೀಪ ಕಟಗೇರಿ, ಶಿದ್ದಪ್ಪ ಚುಳಕಿ, ಸರಸ್ವತಿ, ಮಣಿಕಂಠ, ಅರ್ಜುನ ಪಾಟೀಲ, ಸಿ.ಎಸ್.ಸಿ. ಸೇವಾದಾರರು, ಸೇವಾಪ್ರತಿನಿಧಿಗಳು, ಸಂಘದ ಸದಸ್ಯರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಪೌಷ್ಟಿಕ ಆಹಾರದಿಂದ ಅಪೌಷ್ಟಿಕತೆ, ರಕ್ತಹೀನತೆ ತಡೆಗಟ್ಟಲು ಸಾಧ್ಯ

■ ಉದಯರಶ್ಮಿ ದಿನಪತ್ರಿಕೆ



ದೇವರ ಹಿಪ್ಪರಗಿ: ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳು ತಮ್ಮ ದೈನಂದಿನ ಆಹಾರದಲ್ಲಿ ಪೌಷ್ಟಿಕಾಂಶಯುಕ್ತ ಆಹಾರವನ್ನು ಸಮರ್ಪಕವಾಗಿ ಸೇವಿಸುವ ಮೂಲಕ ಅಪೌಷ್ಟಿಕತೆ ಮತ್ತು ರಕ್ತಹೀನತೆಯನ್ನು ತಡೆಗಟ್ಟಬೇಕು ಎಂದು ಸಹಾಯಕ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಪುಷ್ಪಾವತಿ ಬಿರಾದಾರ ಹೇಳಿದರು.

ತಾಲೂಕಿನ ಹರನಾಳ ಗ್ರಾಮದ 01ನೇ ಅಂಗನವಾಡಿ ಕೇಂದ್ರದಲ್ಲಿ, ಶಿಶು ಅಭಿವೃದ್ಧಿ ಯೋಜನೆ ಸಿಂದಗಿ ಹಾಗೂ ಸ್ನೇಹ ಸಂಸ್ಥೆಐಎಲ್‌ಪಿ ಯೋಜನೆಯ ಸಹಯೋಗದಲ್ಲಿ ಶುಕ್ರವಾರ ಜರುಗಿದ ಪೋಷಣ ಅಭಿಯಾನ ಹಾಗೂ ಪೌಷ್ಟಿಕ ಶಿಬಿರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಅಂಗನವಾಡಿ ಕೇಂದ್ರಗಳ ಮೂಲಕ ದೊರೆಯುವ ಪೌಷ್ಟಿಕ ಆಹಾರ ಹಾಗೂ ಆರೋಗ್ಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಸ್ನೇಹ ಸಂಸ್ಥೆಯ ಸಂಯೋಜಕ ಸಾಗರ ಘಾಟಗೆ ಮಾತನಾಡಿ, ಅಂಗನವಾಡಿ ಕೇಂದ್ರಕ್ಕೆ ಆಗಮಿಸುವ ಮಕ್ಕಳ ಕಲಿಕಾ ಚಟುವಟಿಕೆಗಳು ಉತ್ತಮವಾಗಿವೆ. ಮಕ್ಕಳ ಕಲಿಕೆ, ಆರೋಗ್ಯ, ಪೌಷ್ಟಿಕತೆ ಹಾಗೂ ಸರ್ವಾಂಗೀಣ ಬೆಳವಣಿಗೆಗೆ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಸಮುದಾಯದ ಪ್ರತಿಯೊಬ್ಬರೂ ಕೈಜೋಡಿಸಬೇಕು. ಮಕ್ಕಳ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರಕ್ಕಿಂತ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪಾಲಕರು ಹಾಗೂ ಗ್ರಾಮಸ್ಥರು ಸಕ್ರಿಯವಾಗಿ ಸಹಕರಿಸಬೇಕು ಎಂದರು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೈ.ಎಸ್. ತಳವಾರ, ಸಂಪನ್ಮೂಲ ವ್ಯಕ್ತಿ ಶ್ರೀಶೈಲ ಜೋಗುರ ಸುಭಾಷ ಬಿರಾದಾರ, ರಾಮನಗೌಡ ಪಾಟೀಲ, ಮಲ್ಲನಗೌಡ ಬಿರಾದಾರ, ದೀಪಾ ಡಾಂಗೆ, ರಾಜೇಶ್ವರಿ ಶಿವಪುರ, ಗರ್ಭಿಣಿಯರು, ತಾಯಂದಿರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು ಇದ್ದರು.

# ಹೆಣ್ಣು ಜಗವ ಬೆಳಗುವ ದೇವತೆ :ಡಾ.ಹೊಸಮನಿ

■ ಉದಯರಶ್ಮಿ ದಿನಪತ್ರಿಕೆ




ಬಸವನ ಬಾಗೇವಾಡಿ: ಹೆಣ್ಣು ಎಂದರೆ ಒಂದು ಅದ್ಭುತ ಶಕ್ತಿ. ಆಕೆ ತನ್ನ ಕುಟುಂಬವನ್ನು ಮಾತ್ರವಲ್ಲದೇ ಇಡೀ ಸಮಾಜವನ್ನು ತಿದ್ದಿ–ತೀಡಿ, ಸಾಮಾಜಿ–ಕ ಪರಿವರ್ತನೆಯಲ್ಲಿ ಪಾತ್ರ ಅನನ್ಯವಾದುದು ಎಂದು ಪ್ರಾಂಶುಪಾಲರಾದ ಡಾ. ನೀಲಪ್ಪ ಹೊಸಮನಿ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೆಡಕ್ರಾಸ್ ಘಟಕದಡಿಯಲ್ಲಿ ಅವರು ಮಾತನಾಡುತ್ತಾ, ಬೇಟಿಬಚಾವೋಬೇಟಿಪಡಾವೋ ಎಂಬಂತೆ ಹುಟ್ಟುವ ಪ್ರತಿ ಹೆಣ್ಣು ಮಗುವಿಗೆ ಒಳ್ಳೆಯ ಶಿಕ್ಷಣ ನೀಡುವಂತಾಗಬೇಕು. ಹೆಣ್ಣು ಮನೆಗೆ ಹುಣ್ಣು ಎಂಬ ತಾತ್ಸಾರ ಭಾವ ತ್ಯಜಿಸಿ, ನಮ್ಮ ದೇಶದ ಸಂಸ್ಕೃತಿಯ ಪ್ರತಿಬಿಂಬವಾದ ಹೆಣ್ಣು ಮಗುವನ್ನು ಗೌರವಿಸಬೇಕು ಎಂದರು. ಈ ಜನಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಪ್ರೊ. ಎಂ.ಎಸ್.ಖೊದ್ನಾಪೂರ, ಡಾ. ಸಂತೋಷ ಕಬಾಡೆ, ಡಾ. ಹೆಚ್.ಎಂ.ನಾಟೀಕಾರ, ರೆಡಕ್ರಾಸ್ ಘಟಕದ ಸಂಚಾಲಕಿ ಪ್ರೊ. ಲೀಲಾವತಿ.ಸಿ., ಪ್ರೊ. ಶ್ರೀಶೈಲ ಬಳವಾಟ, ಪ್ರೊ. ಎಸ್.ಬಿ.ಜಾಲವಾದಿ, ಡಾ. ಪ್ರಿಯಾಂಕಾ ಜಿಂದೆ, ಪ್ರೊ. ಇಸ್ಮಾಯಿಲ್ ಶಫಿಯುಲ್ಲ, ಡಾ. ಸುರೇಶ ಡಬ್ಬಿ, ಪ್ರೊ. ರಾಘವೇಂದ್ರ ಗುರಜಾಳ, ಎಸ್.ಬಿ. ವಡ್ಡೋಡಗಿ, ರೇಣುಕಾ ಹೆಬ್ಬಾಳ, ನಂದಪ್ಪ ಬಿರಾದಾರ, ರವಿ ಗೌಡರ, ರಮೇಶ ಕಡೇಮನಿ, ಶ್ರೀಶೈಲ ಪೂಜಾರಿ, ಲಕ್ಷ್ಮಣಗೌಡ ಪಾಟೀಲ, ಹಾಗೂ ಕಾಲೇಜಿನ ಎಲ್ಲ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪಂಚ ಗ್ಯಾರಂಟಿ ಸಮಿತಿ ಸದಸ್ಯರು ಪ್ರಿಯಾಂಕ್ ಖರ್ಗೆ ಅವರ ಕೈ ಬಲ ಪಡಿಸಿ: ಸಾಲಿ



ಚಿತ್ತಾಪುರ: ನೂತನವಾಗಿ ಆಯ್ಕೆಯಾದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಗೃಹ ಮಂತ್ರಿ ಪ್ರಿಯಾಂಕ್ ಖರ್ಗೆ ಅವರ ಕೈ ಬಲಪಡಿಸಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ಸಾಲಿ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆದ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ನೂತನ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂಬರುವ ಕೆಲವೇ ತಿಂಗಳುಗಳಲ್ಲಿ ಜಿಪಂ ಹಾಗೂ ತಾಪಂ ಚುನಾವಣೆಗಳು ಬರುತ್ತಿವೆ. ಹೀಗಾಗಿ ನೂತನವಾಗಿ ಆಯ್ಕೆಯಾದ ಸದಸ್ಯರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪ್ರಿಯಾಂಕ್ ಖರ್ಗೆ ಅವರ ಕೈ ಬಲಪಡಿಸಬೇಕು ಎಂದು ಅವರು ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ 12ನೇ ಶತಮಾನದ ಬಸವಣ್ಣನವರ ತತ್ವಾದರ್ಶದಂತೆ ಪಂಚ ಗ್ಯಾರಂಟಿ ಸಮಿತಿಯಲ್ಲಿ ಪ್ರತಿಯೊಂದು ಜಾತಿಗಳಿಗೆ ಪಾತ್ಯನಿಧ್ಯ ನೀಡುವುದರ ಮೂಲಕ 14 ಜನರನ್ನು ನಾಮನಿರ್ದೇಶನ ಮಾಡುವ ಮೂಲಕ ಸಮಾನತೆ ನೀಡಿದ್ದಾರೆ. ಹೀಗಾಗಿ ನೂತನವಾಗಿ ಆಯ್ಕೆಯಾದ ಸದಸ್ಯರು ಪಟ್ಟಣ ಸೇ–ರಿದಂತೆ ಪ್ರತಿಯೊಂದು ಗ್ರಾಮಗಳಿಗೆ ತೆರಳಿ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ತಲುಪತ್ತಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ಮನವರಿಕೆ ಮಾಡಿಕೊಂಡು, ಯಾರಿಗೆ ತಲುಪುತ್ತಿಲ್ಲ ಅವರಿಗೆ ತಲುಪಿಸುವ ಕೆಲಸ ಪ್ರಾಮಾಣಿಕವಾಗಿ ಮಾಡಬೇಕು ಎಂದರು.

ಪಂಚ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯ–ರಿಗೆ, ಮಹಿಳೆಯರಿಗೆ ಹಾಗೂ ಯುವಕರಿಗೆ ತುಂಬಾ ಉಪಯುಕ್ತವಾಗಿದೆ. ಪಕ್ಷಕ್ಕೆ ಯಾವಾಗಲೂ ನಿಷ್ಠರಾಗಿರಬೇಕು ಆಗ ಉತ್ತಮ ಸ್ಥಾನಮಾನಗಳು ಸಿಗಲಿವೆ. ಈ ನಿಟ್ಟಿನಲ್ಲಿ ಎಲ್ಲರನ್ನೂ ಜೊತೆಯಾಗಿ ತೆಗೆದುಕೊಂಡು ಹೋಗುವಂತಹ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷವಾಗಿದೆ ಎಂದು ಹೇಳಿದರು.

ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಬೊಮ್ಮನಳ್ಳಿ ಮಾತನಾಡಿ, ಚಿತ್ತಾಪುರ ತಾಲೂಕು ರಾಜ್ಯದಲ್ಲಿಯೇ ತೀರಾ ಹಿಂದುಳಿದ ತಾಲೂಕು ಎನ್ನುವ ಹಣೆಪಟ್ಟಿಯಲ್ಲಿತ್ತು. ಅದನ್ನು ಹೋಗಲಾಡಿಸಲು ಸಚಿವ ಪ್ರಿಯಾಂಕ್ ಖರ್ಗೆ ಅವರು ಚಿತ್ತಾಪುರ ತಾಲೂಕಿಗೆ ಸಾವಿರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಪಡಿಸಿದ ರಾಜ್ಯದ ಏಕೈಕ ನಾಯಕರಾಗಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ ಅವರ ಹತ್ತಿರ ಆ ಜಾತಿ ಈ ಜಾತಿ ಎನ್ನುವ ಭೇದ ಭಾವವಿಲ್ಲ ಹೀಗಾಗಿಯೇ ಪಂಚ ಗ್ಯಾರಂಟಿ ಸಮಿತಿಗೆ ಜಾತಿವಾರು 14 ಜನರನ್ನು ನಾಮನಿರ್ದೇಶನ ಮಾಡುವ ಮೂಲಕ ಸಣ್ಣ ಸಣ್ಣ ಸಮಾಜಗಳಿಗೆ ಅವಕಾಶ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಕೆಪಿಸಿಸಿ ಸದಸ್ಯ ನಾಗರೆಡ್ಡಿ ಪಾಟೀಲ್ ಕರದಾಳ, ಗ್ಯಾರಂಟಿ ಸಮಿತಿ ಸದಸ್ಯ ರಮೇಶ ಹಡಪದ ಕೊಲ್ಲೂರ್ ಮಾತನಾಡಿದರು. ಇದೇ ವೇಳೆ ಪಂಚ ಗ್ಯಾರಂಟಿ ಸಮಿತಿಗೆ ಆಯ್ಕೆಯಾದ 14 ಜನರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಶಿವರುದ್ರ ಭೀಣಿ, ತಾಪಂ ಮಾಜಿ ಅಧ್ಯಕ್ಷ ಜಗಣ್ಣಗೌಡ ರಾಮತೀರ್ಥ, ಇಸ್ಮಾಯಿಲ್ ಸಾಬ್ ಕಮರವಾಡಿ, ರಮೇಶ ಕಟ್ಟಿಮನಿ, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ದೇವು ಯಾಬಾಳ, ಸಂಜಯ ಬುಳಕರ್, ವೆಂಕಟೇಶ ಕುಲಕರ್ಣಿ, ಸುರೇಶ ಗುತ್ತೇದಾರ, ವಿನ್ನುಕುಮಾರ್ ಜೆ.ಡಿ, ಆರ್.ಡಿ ಪಾಟೀಲ್,ಇದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR